

ಆಗಸ್ಟ್ 2013
ಬೆಲೆ ರೂ. 1

# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

## ಭಾರತ ಭೂಶಿರ ನಮ್ಮ ಕಾಶ್ಮೀರ

“ ಸ್ವಾತಂತ್ರ್ಯೋತ್ಸವ ವಿಶೇಷ ಲೇಖನ

# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 23 ಸಂಚಿಕೆ 11

ಆಗಸ್ಟ್ 2013, ಬೆಲೆ ರೂ. 1



**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷ**
ವಸಂತ ಶೆಟ್ಟಿ ಬೆಳ್ಳಾರೆ: 9958697823

**ಉಪಾಧ್ಯಕ್ಷರು**
ಬಸವರಾಜು ಬಿ.ಕೆ.: 9810391608
ಆಶಾಲತಾ ಎಂ.: 9891249149

**ಪ್ರಧಾನ ಕಾರ್ಯದರ್ಶಿ**
ಸಿ.ಎಂ.ನಾಗರಾಜ: 9811325440

**ಕೋಶಾಧಿಕಾರಿ**
ಡಾ. ಅವನೀಂದ್ರನಾಥ್ ರಾವ್:9868123382

**ಜಂಟಿ ಕಾರ್ಯದರ್ಶಿಗಳು**
ಎಸ್.ಸಿ. ಹೇಮಲತಾ: 9971121636
ಟಿ.ಎಂ. ಮೈಲಾರಪ್ಪ: 9868347461

**ಸಮಿತಿ ಸದಸ್ಯರು**
ಆಂಜನಿ ಗೌಡ: 9811165354
ರಾಧಾಕೃಷ್ಣ: 9818252183
ಪೂರ್ಣಿಮಾ ಗೌಡ: 8860916899
ವಿ.ವಿ.ಬಿರಾದಾರ: 9873005409
ಪಿ.ಸಿ.ಶ್ರೀನಿವಾಸ್: 9868170790
ಆನಂದ ಮುರಗೋಡ: 9312931233
ಆಶಾ ಶ್ಯಾಮಸುಂದರ್: 9871256177
ಬಸವರಾಜ ಮೇಟಿ: 9810282951
ಟಿ.ಪಿ. ಬೆಳ್ಳಿಯಪ್ಪ: 9654555795
ಕುಸುಮಾ ಪಿ. ನಂದರಗಿ 9868393955


## ನೇರ ಮಾತು

ಅಂತೂ ಬಹು ನಿರೀಕ್ಷಿತ ದೆಹಲಿ ಕರ್ನಾಟಕ ಸಂಘದ ಚುನಾವಣೆ ಜುಲೈ 14ರಂದು ನಡೆದಿದೆ. ಪ್ರಜಾಸತ್ತಾತ್ಮಕವಾಗಿ ಆರಿಸಿ ಬಂದ ಹೊಸ ಕಾರ್ಯಕಾರಿ ಸಮಿತಿ, ಹೊಸ ಹುರುಪಿನೊಂದಿಗೆ ಕೆಲಸ ಕಾರ್ಯಗಳನ್ನು ಕೈಗೆತ್ತಿಕೊಂಡು ಕಾರ್ಯಪ್ರವೃತ್ತವಾಗಿದೆ.

ಈ ಹಿಂದೆ ಡಾ. ಪುರುಷೋತ್ತಮ ಬಿಳಿಮಲೆಯವರು ಸಂಘದ ಅಧ್ಯಕ್ಷರಾಗಿದ್ದಾಗ ದೆಹಲಿ ಕರ್ನಾಟಕ ಸಂಘದ ಹಿರಿಮೆ ಕರ್ನಾಟಕದಾದ್ಯಂತ ಪಸರಿಸಿ ಹಿರಿಯ ಸಾಹಿತಿ, ಕಲಾವಿದರಿಂದ ಮೆಚ್ಚುಗೆ ಪಡೆದುದಲ್ಲದೇ ಪ್ರಶಸ್ತಿ ಮನ್ನಣೆಗೆ ಪಾತ್ರವಾಗಿತ್ತು. ದೆಹಲಿ ಕರ್ನಾಟಕ ಸಂಘ ಹಿಂದೆ ಗಳಿಸಿದ ಕೀರ್ತಿಯನ್ನು ಮತ್ತು ಕರ್ನಾಟಕದ ಮಂದಿಯೆಲ್ಲರ ಪ್ರೀತಿಯನ್ನು ಇಂದು ಉಳಿಸಿಕೊಂಡಿದೆಯೇ ಎಂಬ ಪ್ರಶ್ನೆಯನ್ನು ನಮ್ಮಲ್ಲೇ ಕೇಳಿಕೊಂಡು ಅದಕ್ಕೆ ನಾವೇ ಉತ್ತರ ಹುಡುಕಬೇಕು.

ಈ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘಕ್ಕೆ ಒಂದು ಬದಲಾವಣೆಯ ಮಾರ್ಗಸೂಚಿ, ಸುದೃಢ ಆಡಳಿತ ಯೋಜನೆ, ನಿಗದಿತ ಸಮಯದ ಕಾರ್ಯಕ್ರಮಗಳ ಅನುಷ್ಠಾನದ ಕ್ರಿಯಾ ಯೋಜನೆಯ ಅಗತ್ಯವಿದೆ. ಜೊತೆಗೆ ಕಾರ್ಯಕಾರಿ ಸಮಿತಿಯ ಒಮ್ಮತದ ಬೆಂಬಲ ಹಾಗೂ ಸಂಘದ ಸರ್ವ ಸದಸ್ಯರ ಸಹಕಾರ ಅತೀ ಅಗತ್ಯ. ಹೊಸ ಕಾರ್ಯಕಾರಿ ಸಮಿತಿ ಯುವ ಉತ್ಸಾಹಿಗಳ ತಂಡವಾಗಿರುವುದರಿಂದ ಹಿರಿಯರ ಮಾರ್ಗದರ್ಶನದ ಅವಶ್ಯಕತೆಯನ್ನು ಮನಗಂಡು ಸಂಘದ ಸಂವಿಧಾನದ ಪ್ರಕಾರ ಹಿರಿಯ ಕನ್ನಡಿಗರಾದ ಶ್ರೀ ಐ. ರಾಮಮೋಹನ ರಾವ್, ಶ್ರೀ ಎಸ್. ಎಸ್. ಜವಳಿ, ಡಾ. ಪುರುಷೋತ್ತಮ ಬಿಳಿಮಲೆ ಹಾಗೂ ಶ್ರೀ ಅರವಿಂದ ಕೌಜಲಗಿ ಅವರನ್ನು ಕಾರ್ಯಕಾರಿ ಸಮಿತಿ ಸಭೆಗೆ ವಿಶೇಷ ಆಮಂತ್ರಿತರನ್ನಾಗಿ ಆಹ್ವಾನಿಸಲಾಗಿದೆ.

ಈ ಹಿಂದೆ ದೆಹಲಿ ಕರ್ನಾಟಕ ಸಂಘಕ್ಕೆ ಅಧ್ಯಕ್ಷರಾಗಿದ್ದ ರಾಜ್ಯಸಭೆಯ ಉಪಾಧ್ಯಕ್ಷರಾಗಿದ ಶ್ರೀ ಎಸ್. ವಿ. ಕೃಷ್ಣಮೂರ್ತಿರಾವ್, ಕೇಂದ್ರದ ಮಾಜಿ ಕಾನೂನು ಸಚಿವೆ ಡಾ. ಸರೋಜಿನಿ ಮಹಿಷಿ, ಕೇಂದ್ರದ ಮಾಜಿ ಆರೋಗ್ಯ ಸಚಿವ ಶ್ರೀ ಜಿ.ವೈ.ಕೃಷ್ಣನ್, ಸಾಹಿತಿ ಎನ್.ಪಿ.ಭಟ್ (ರಂಜನ್ ಭಟ್), ಜಾನಪದ ವಿದ್ವಾಂಸ ಡಾ.ಪುರುಷೋತ್ತಮ ಬಿಳಿಮಲೆ, ನಾಲ್ವರು ಪ್ರಧಾನಿಗಳ ಮಾಧ್ಯಮ ಸಲಹೆಗಾರರಾಗಿದ್ದ ಶ್ರೀ ಐ.ರಾಮಮೋಹನ್ ರಾವ್, ವಿದ್ವಾಂಸ ಶ್ರೀ ಸಿ.ವಿ.ಗೋಪಿನಾಥ್ ಮುಂತಾದ ಗಣ್ಯರ ಕೊಡುಗೆ ಅಪಾರವಾದುದು. ಈ ಮಹಾನ್ ವ್ಯಕ್ತಿಗಳು ಅಲಂಕರಿಸಿರುವ ಸಂಘದ ಅಧ್ಯಕ್ಷ ಸ್ಥಾನವನ್ನು ನಾನು ಸ್ವಲ್ಪ ಮುಜುಗರದಿಂದಲೇ, ಆದರೆ ಧೈರ್ಯವಾಗಿ ವಹಿಸಿಕೊಂಡು ಪ್ರಾಮಾಣಿಕವಾಗಿ, ಹಿರಿಯರು ಹಾಕಿ ಕೊಟ್ಟ ಬುನಾದಿಗೆ ಧಕ್ಕೆ ಬಾರದ ರೀತಿಯಲ್ಲಿ ಸಂಘವನ್ನು ಮುನ್ನಡೆಸುವ ಸಂಕಲ್ಪ ಮಾಡಿದ್ದೇನೆ. ಈ ನಿಟ್ಟಿನಲ್ಲಿ ಕೆಲಸ ಕಾರ್ಯಗಳಿಗೆ ಈಗಾಗಲೇ ಚಾಲನೆ ನೀಡಲಾಗಿದೆ.

ದೆಹಲಿ ಕರ್ನಾಟಕ ಸಂಘ ಇತರ ಸಂಘಗಳಂತಲ್ಲ, ಇದು ಕೇವಲ ದೆಹಲಿಯ ಕರ್ನಾಟಕ ಸಂಘವಾಗದೇ ಕರ್ನಾಟಕ ಹಾಗೂ ದೇಶ, ವಿದೇಶಗಳಲ್ಲಿರುವ ಸಮಸ್ತ ಕನ್ನಡಿಗರನ್ನು ದೇಶದ ರಾಜಧಾನಿಯಲ್ಲಿ ಪ್ರತಿನಿಧಿಸುವ ಮತ್ತು ಕನ್ನಡಿಗರ ರಾಜ್ಯ ಮತ್ತು ರಾಷ್ಟ್ರಮಟ್ಟದ ಸಮಸ್ಯೆಗಳಿಗೆ ಸ್ಪಂದಿಸಬೇಕಾದ ಜವಾಬ್ದಾರಿಯನ್ನು ಹೊಂದಿದೆ. ಸಮಸ್ಯೆಗಳಿಗೆ ಸ್ಪಂದಿಸುವ ಜೊತೆಗೆ ಮುಖ್ಯವಾಗಿ ಕನ್ನಡಿಗರ, ಕರ್ನಾಟಕದ ಸಾಂಸ್ಕೃತಿಕ ರಾಯಭಾರಿಯಾಗಿ ಕೆಲಸ ಮಾಡಬೇಕಾಗಿದೆ.

ಡಾ.ಪುರುಷೋತ್ತಮ ಬಿಳಿಮಲೆಯವರ ಅಧ್ಯಕ್ಷತೆಯಲ್ಲಿ ದೆಹಲಿ ಕರ್ನಾಟಕ ಸಂಘದ ಹೊಸ ಸಾಂಸ್ಕೃತಿಕ ಸಮುಚ್ಚಯ ಕಟ್ಟಡದ ಕೆಲಸ ಕಾರ್ಯ ನಡೆಯುತ್ತಿರುವಾಗ ಸಂಘಕ್ಕೆ ಹಣದ ಕೊರತೆಯಿತ್ತು. ಕಟ್ಟಡದ ಕೆಲಸ ಕಾರ್ಯಗಳು ಇನ್ನೆಲ್ಲಿ ನಿಂತು ಬಿಡುವುದೋ ಎನ್ನುವ ಆತಂಕವೂ ಇತ್ತು. ಬ್ಯಾಂಕ್‌ಗಳನ್ನು ಸಾಲಕ್ಕಾಗಿ ಮೊರೆ ಹೋದಾಗ ಅವರು ಕೊಡುವ ಸಾಲದ ಮೊತ್ತಕ್ಕೆ ಭದ್ರತೆ ಮತ್ತು ಸಾಲದ ಕಂತನ್ನು ಕಟ್ಟುವ ಬಗ್ಗೆ ನಿಖರವಾದ ವರಮಾನವನ್ನು ಕೊಡಬೇಕಿತ್ತು. ಈ ಎರಡೂ ನಮ್ಮಲ್ಲಿ ವ್ಯವಸ್ಥಿತವಾಗಿ ಇಲ್ಲದ ಕಾರಣ ಸಾಲ ಕೊಡುವುದಕ್ಕೆ ಹೆಚ್ಚಿನ ಬ್ಯಾಂಕುಗಳು ಹಿಂದೇಟು ಹಾಕಿದಾಗ ಸಾಂಸ್ಕೃತಿಕ ಸಮುಚ್ಚಯ ಕಟ್ಟಡ ಸಮಿತಿಯ ಅಧ್ಯಕ್ಷರಾಗಿದ್ದ ಶ್ರೀ ರಾಮಮೋಹನ್ ರಾವ್ ಅವರ ಪ್ರಯತ್ನದಿಂದಾಗಿ ಅತೀ ತ್ವರಿತಗತಿಯಲ್ಲಿ ಕರ್ಣಾಟಕ ಬ್ಯಾಂಕ್ ಮೂರು ಕೋಟಿ ರೂಪಾಯಿಗಳ ಸಾಲ ಸೌಲಭ್ಯವನ್ನು ನೀಡಿತ್ತು. ಅಂದು ಪಡೆದ ಕರ್ಣಾಟಕ ಬ್ಯಾಂಕಿನ ಸಾಲದಿಂದಾಗಿ ಸಾಂಸ್ಕೃತಿಕ ಸಮುಚ್ಚಯದ ನಿರ್ಮಾಣ ಯಶಸ್ವಿಯಾಗಿ ನಡೆಯಿತು. ಆ ಸಾಲವನ್ನು ಪಡೆಯುವ ಸಂದರ್ಭದಲ್ಲಿ ಅಂದಿನ ಕಾರ್ಯಕಾರಿ ಸಮಿತಿಯಲ್ಲಿ ನಾನೂ ಇದ್ದೆ. ಇದೀಗ ಕಳೆದ ಜುಲೈ ತಿಂಗಳಲ್ಲಿ ಸಾಲದ ಉಳಿದ ಮೊತ್ತವನ್ನು ನೀಡಿ ಸಂಘದ ಅಧ್ಯಕ್ಷನಾಗಿ ಸಾಲದ ಕೊನೆಯ ಕಂತನ್ನು ಪಾವತಿಸಿ ಸಂಘವನ್ನು ಋಣ ಮುಕ್ತಗೊಳಿಸಿದ ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾಗಿದ್ದೇನೆ. ಸಕಾಲದಲ್ಲಿ ಮೂರು ಕೋಟಿ ರೂಪಾಯಿ ಸಾಲ ನೀಡುವ ಮೂಲಕ ಸಹಕಾರ ನೀಡಿದ ಕರ್ಣಾಟಕ ಬ್ಯಾಂಕಿಗೆ, ದೆಹಲಿ ಕರ್ನಾಟಕ ಸಂಘವು ಈ ಮೂಲಕ ಕೃತಜ್ಞತೆಯನ್ನು ಸಲ್ಲಿಸುತ್ತದೆ.

ಹೊಸ ಕಾರ್ಯಕಾರಿ ಸಮಿತಿಯ ಹೊಸ ಯೋಜನೆಗಳು ನಿಮಗೆ ಹೊಸತನವನ್ನು ನೀಡುವಲ್ಲಿ ಯಶಸ್ವಿಯಾದೀತು ಎನ್ನುವ ಭರವಸೆ ನನ್ನದು. ಅ

***ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು***

## ಮುನ್ನೋಟ

ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಗೆ 2013–15ರ ಅವಧಿಗಾಗಿ ಜುಲೈ 14ರಂದು ನಡೆದ ಚುನಾವಣೆಯಲ್ಲಿ ಪ್ರಜಾಸತ್ತಾತ್ಮಕವಾಗಿ ಸೂಕ್ತ ಹಾಗೂ ಅರ್ಹರನ್ನು ತಾವು ಆಯ್ಕೆ ಮಾಡಿದ್ದೀರಿ. ಸಮರ್ಥರನ್ನು ಆಯ್ಕೆ ಮಾಡುವ ವಿವೇಕವನ್ನು ಪ್ರಶಂಸನೀಯವಾಗಿ ಪ್ರದರ್ಶಿಸಿದ ಸಂಘದ ಎಲ್ಲಾ ಸದಸ್ಯರಿಗೆ ನಾವು ಆಭಾರಿಯಾಗಿದ್ದೇವೆ.

ಚುನಾವಣೆಯನ್ನು ಅತ್ಯಂತ ಅಚ್ಚುಕಟ್ಟಾಗಿ, ಯಾವುದೇ ಗೊಂದಲಗಳಿಲ್ಲದೇ ಶಾಂತ ರೀತಿಯಿಂದ ನಡೆಸಿದ ಚುನಾವಣಾಧಿಕಾರಿ ಹಿರಿಯ ಕನ್ನಡಿಗರಾದ ಶ್ರೀ ಬಸವರಾಜ ಕಲ್ಲೂರ್ ಮತ್ತು ಡಾ.ಬಿ.ವಿ.ಅಡ್ಕೋಳಿ ಹಾಗೂ ಅವರ ಜತೆ ಸಹಕರಿಸಿದ ತಂಡದ ಇತರ ಸದಸ್ಯರಿಗೆ ನಮ್ಮ ಅಭಿನಂದನೆಗಳು.

ಮುಂಗಾರಿನ ಕಾರ್ಮೋಡ ಇಳೆಗೆ ಮಳೆಯಾಗಿ ಇಳಿದು ಪರಿಸರ ತಂಪಾಗಿದೆ. ಹಸಿರಾಗಿದೆ. ಸಂಘದ ಚಟುವಟಿಕೆಗಳನ್ನು ಬಿರುಸಿನಿಂದ ನಡೆಸಲು ತಯಾರಿ ನಡೆಸುತ್ತಿದ್ದೇವೆ. ಮುಂಬರುವ ತಿಂಗಳಿನಿಂದ ಸಾಹಿತ್ಯ, ಸಾಂಸ್ಕೃತಿಕ, ಆಟೋಟ ಸ್ಪರ್ಧೆ, ನಾಟಕ ಸ್ಪರ್ಧೆ ಮುಂತಾದ ನಿಗದಿತ ಕಾರ್ಯಕ್ರಮಗಳು ಆರಂಭವಾಗಲಿವೆ. ಈ ಸಲದ ಕ್ರಿಕೆಟ್ ಪಂದ್ಯಾವಳಿಯು ಅಕ್ಟೋಬರ್ ನಲ್ಲಿ ನಡೆಯಲಿದ್ದು ಹೆಚ್ಚೆಚ್ಚು ತಂಡಗಳು ಈಗಲೇ ತಮ್ಮ ಪ್ರಾಕ್ಟೀಸ್ ಆರಂಭಿಸಿ ಹಿಂದಿನ ದಾಖಲೆಗಳನ್ನು ಮುರಿಯಲು ಪ್ರಯತ್ನಿಸಬಹುದು. ಸಂಘದ ಎಲ್ಲಾ ಕಾರ್ಯಕ್ರಮಗಳಲ್ಲಿ ನೀವೆಲ್ಲರು ಸಕ್ರಿಯವಾಗಿ ಭಾಗವಹಿಸಬೇಕೆಂದು ನಮ್ರ ವಿನಂತಿ. ಅ

*ಸಿ.ಎಂ.ನಾಗರಾಜ*
*ಪ್ರಧಾನ ಕಾರ್ಯದರ್ಶಿ*




## ಸಂಘದ ಸರ್ವ ಸದಸ್ಯರ

# ವಾರ್ಷಿಕ ಮಹಾಸಭೆ

ದೆಹಲಿ ಕರ್ನಾಟಕ ಸಂಘದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯು ಇದೇ ಜುಲೈ 14ರಂದು ದೆಹಲಿ ಕನ್ನಡ ಶಾಲೆಯ ಆವರಣದಲ್ಲಿ ನಡೆಯಿತು. ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಸಭೆಯ ಅಧ್ಯಕ್ಷತೆ ವಹಿಸಿದರು.

ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ್ ಮತ್ತು ಕೋಶಾಧಿಕಾರಿ ಶ್ರೀ ಕೆ.ಆರ್. ರಾಮಮೂರ್ತಿ ಅವರು ಸಭೆಯಲ್ಲಿ ಸದಸ್ಯರ ಪ್ರಶ್ನೆಗಳಿಗೆ ಉತ್ತರಿಸಿದರು. ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳು ಮತ್ತು ಸದಸ್ಯರು ಸಭೆಯಲ್ಲಿ ಹಾಜರಿದ್ದರು.

ಸಭೆಯಲ್ಲಿ ಹಿಂದಿನ ಸರ್ವ ಸದಸ್ಯರ ಮಹಾಸಭೆಯ ಕಾರ್ಯಸೂಚಿಗಳನ್ನು ಅಂಗೀಕರಿಸಲಾಯಿತು. 2011–12 ಸಾಲಿನ ಲೆಕ್ಕಪತ್ರವನ್ನು ಮತ್ತು ವಾರ್ಷಿಕ ವರದಿಯನ್ನು ಸರ್ವ ಸದಸ್ಯರು ಚರ್ಚಿಸಿ ಅಂಗೀಕರಿಸಿದರು. ಮಹಾಸಭೆಯು 2013–14ರ ಸಾಲಿನ ವಾರ್ಷಿಕ ಆರ್ಥಿಕ ಮುಂಗಡ ಪತ್ರವನ್ನು ಕೂಡ ಚರ್ಚಿಸಿ ಅಂಗೀಕರಿಸಿತು. ಸಭೆಯಲ್ಲಿ ಸದಸ್ಯರು ಮಂಡಿಸಿದ ಠರಾವುಗಳನ್ನು ಕೂಡ ಚರ್ಚಿಸಲಾಯಿತು. ಸಂಘದ ಮಾಜಿ ಅಧ್ಯಕ್ಷರುಗಳಾದ ಶ್ರೀ ಐ. ರಾಮಮೋಹನ ರಾವ್ ಮತ್ತು ಡಾ. ಪುರುಷೋತ್ತಮ ಬಿಳಿಮಲೆ ಅವರೂ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಿದರು.

**ಚುನಾವಣೆ**

ಸಂಘದ ಕಾರ್ಯಕಾರಿ ಸಮಿತಿಯ ಅವಧಿಯು ಮುಕ್ತಾಯಗೊಂಡಿರುವ ಹಿನ್ನಲೆಯಲ್ಲಿ ವಾರ್ಷಿಕ ಮಹಾಸಭೆಯ ಜತೆಗೆ 2013–15ರ ಸಾಲಿನ ಹೊಸ ಸಮಿತಿಯ ರಚನೆಯನ್ನು ಚುನಾವಣೆ ಮೂಲಕ ನಡೆಸಲಾಯಿತು.

ಹೊಸ ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳಾಗಿ ಭಾರಿ ಬಹುಮತದಿಂದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ (ಅಧ್ಯಕ್ಷ), ಶ್ರೀ ಬಸವರಾಜು ಬಿ.ಕೆ. ಮತ್ತು ಶ್ರೀಮತಿ ಆಶಾಲತಾ ಎಂ. (ಉಪಾಧ್ಯಕ್ಷರು), ಶ್ರೀ ಸಿ.ಎಂ.ನಾಗರಾಜ (ಪ್ರಧಾನ ಕಾರ್ಯದರ್ಶಿ), ಡಾ. ಅವನೀಂದ್ರನಾಥ್ ರಾವ್ (ಕೋಶಾಧಿಕಾರಿ), ಶ್ರೀಮತಿ ಎಸ್.ಸಿ. ಹೇಮಲತಾ ಮತ್ತು ಶ್ರೀ ಟಿ.ಎಂ. ಮೈಲಾರಪ್ಪ (ಜಂಟಿ ಕಾರ್ಯದರ್ಶಿಗಳು) ಅವರು ಆರಿಸಿಬಂದರು. ಸಮಿತಿ ಸದಸ್ಯರಾಗಿ ಶ್ರೀ ಆಂಜನಿ ಗೌಡ, ಶ್ರೀ ರಾಧಾಕೃಷ್ಣ, ಶ್ರೀಮತಿ ಪೂರ್ಣಿಮಾ ಗೌಡ, ಶ್ರೀ ವಿ.ವಿ.ಬಿರಾದಾರ, ಶ್ರೀ ಪಿ.ಸಿ.ಶ್ರೀನಿವಾಸ್, ಶ್ರೀ ಆನಂದ ಈಶ್ವರಪ್ಪ ಮುರಗೋಡ, ಶ್ರೀಮತಿ ಆಶಾ ಶ್ಯಾಮಸುಂದರ್, ಶ್ರೀ ಬಸವರಾಜ ಮೇಟಿ ಅವರು ವಿಜಯ ಗಳಿಸಿದರು.

**ಸರ್ವಸದಸ್ಯರಿಂದ ಅಂಗೀಕಾರ ಪಡೆದು ತಿದ್ದುಪಡಿಗೊಂಡ ಸಂಘದ ನಿಯಮಾವಳಿಗಳ ಪ್ರಕಾರ ಚುನಾವಣಾ ಪ್ರಕ್ರಿಯೆಯನ್ನು ನಡೆಸಲಾಯಿತು.**

ದೆಹಲಿಯ ಹಿರಿಯ ಕನ್ನಡಿಗ ಶ್ರೀ ಬಿ.ಎಸ್. ಕಲ್ಲೂರ್ ಅವರು ಚುನಾವಣಾ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದರು. ಜತೆಗೆ ಡಾ. ಬಿ.ವಿ. ಅಡ್ಕೋಳಿ ಮತ್ತು ತಂಡ ಚುನಾವಣೆಯನ್ನು ನಡೆಸುವಲ್ಲಿ ಸಹಕರಿಸಿತು. ಇದೇ ಮೇ 12 ರಂದು ನಡೆದ ವಿಶೇಷ ಮಹಾಸಭೆಯಲ್ಲಿ ಸರ್ವಸದಸ್ಯರಿಂದ ಅಂಗೀಕಾರ ಪಡೆದು ತಿದ್ದುಪಡಿಗೊಂಡ ಸಂಘದ ನಿಯಮಾವಳಿಗಳ ಪ್ರಕಾರ ಚುನಾವಣಾ ಪ್ರಕ್ರಿಯೆಯನ್ನು ನಡೆಸಲಾಯಿತು. ಸಂಘದ ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ, ಜಂಟಿ ಕಾರ್ಯದರ್ಶಿ ಮತ್ತು ಕೋಶಾಧಿಕಾರಿ ಹುದ್ದೆಗಳಲ್ಲಿ ಉಪಾಧ್ಯಕ್ಷ ಮತ್ತು ಜಂಟಿ ಕಾರ್ಯದರ್ಶಿಗಳ ಎರಡೆರಡು ಹುದ್ದೆಗಳಲ್ಲಿ ತಲಾ ಒಂದು ಹುದ್ದೆಯು ಮಹಿಳೆಯರಿಗೆ ಮೀಸಲಾಗಿದೆ. ಸಮಿತಿಯ ಎಂಟು ಸದಸ್ಯರ ಹುದ್ದೆಗಳಲ್ಲಿ ಎರಡು ಮಹಿಳೆಯರಿಗೆ ಮೀಸಲಿಡಲಾಗಿದೆ.

ಚುನಾವಣಾ ಕಣದಲ್ಲಿದ್ದ ಇತರ ಸ್ಪರ್ಧಿಗಳು: ಡಾ. ವೆಂಕಟಾಚಲ ಹೆಗಡೆ (ಅಧ್ಯಕ್ಷ ಸ್ಥಾನಕ್ಕೆ), ಶ್ರೀ ಎನ್. ಆರ್. ಶ್ರೀನಾಥ್ ಮತ್ತು ಶ್ರೀಮತಿ ರೇಣುಕಾ ನಿಡಗುಂದಿ (ಉಪಾಧ್ಯಕ್ಷ ಸ್ಥಾನಗಳಿಗೆ), ಶ್ರೀಮತಿ ಉಷಾ ಭರತಾದ್ರಿ (ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ), ಶ್ರೀ ಕೆ.ಎಸ್.ಜಿ. ಶೆಟ್ಟಿ, ಶ್ರೀ ಟಿ.ಪಿ. ಬೆಳ್ಳಿಯಪ್ಪ, ಶ್ರೀಮತಿ ಜಮುನಾ ಮಠದ್ (ಜಂಟಿ ಕಾರ್ಯದರ್ಶಿ ಸ್ಥಾನಗಳಿಗೆ) ಮತ್ತು ಶ್ರೀ ಕೆ.ಆರ್. ರಾಮಮೂರ್ತಿ (ಕೋಶಾಧಿಕಾರಿ ಸ್ಥಾನಕ್ಕೆ). ಸಮಿತಿಯ ಸದಸ್ಯ ಸ್ಥಾನಕ್ಕೆ ಸ್ಪರ್ಧಿಸಿದ ಇತರ ಅಭ್ಯರ್ಥಿಗಳು: ಶ್ರೀ ಎಂ. ಶಿವರಾಮ ರೈ, ಶ್ರೀ ಶಶಿಕಾಂತ್ ಪಾಟೀಲ್, ಶ್ರೀ ಬಾಬುರಾಜ್ ಪೂಜಾರಿ, ಶ್ರೀ ಬಿ. ನಾರಾಯಣ, ಶ್ರೀಮತಿ ಭಾರತಿ ಜಿ.ಎಂ., ಶ್ರೀಮತಿ ಮೀನಾ ವಸಂತ್, ಶ್ರೀ ಎನ್.ಎಂ. ಸನ್ಮಾನ್ ಮತ್ತು ಶ್ರೀ ಪ್ರಶಾಂತ್ ಪಿ.ಟಿ. ಅ

**ಅಭಿಮತ ವರದಿ**



# ದೆಹಲಿ ಕರ್ನಾಟಕ ಸಂಘದ ಹೊಸ ಕಾರ್ಯಕಾರಿ ಸಮಿತಿ



**ಅಧ್ಯಕ್ಷ :**
**ವಸಂತ ಶೆಟ್ಟಿ ಬೆಳ್ಳಾರೆ**

ಫರಿದಾಬಾದಿನ ಸೆಂಚುರಿ ಕ್ರೇನ್ ಇಂಜಿನಿಯರ್ಸ್ ಕಂಪೆನಿಯಲ್ಲಿ ಉಪಾಧ್ಯಕ್ಷರಾಗಿರುವ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷರಾಗಿ, ಸಹ ಕಾರ್ಯದರ್ಶಿಯಾಗಿ ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಅವರು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷರೂ ಆಗಿದ್ದರು. ಬರಹಗಾರನಾಗಿ 'ಅಂತರ್ಗತ' ಕಿರುಕಾದಂಬರಿ, 'ಅಕಾಲ' ಕಥಾ ಸಂಕಲನ ಹಾಗೂ 'ಅಧ್ಯಾಯ' ಕವನ ಸಂಕಲನ ಪ್ರಕಟಿಸಿದ್ದಾರೆ. ತಮ್ಮ ದೆಹಲಿ ಮಿತ್ರ ಪ್ರಕಾಶನದಿಂದ 'ಆಶಾಸೌಧ', 'ಅದಮ್ಯ', 'ಅಳಿಕೆ' ಕೃತಿಗಳನ್ನು ಪ್ರಕಟಿಸಿದ್ದಾರೆ.

**ಉಪಾಧ್ಯಕ್ಷ**
**ಬಸವರಾಜು ಬಿ.ಕೆ.**



ಭಾರತೀಯ ಚಿಕಿತ್ಸಾ ಕೇಂದ್ರೀಯ ಪರಿಷತ್, ನವದೆಹಲಿಯಲ್ಲಿ ಅಧೀಕ್ಷಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಬಸವರಾಜು ಬಿ.ಕೆ. ಅವರು ಸತತ ಎರಡನೇ ಬಾರಿ ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷರಾಗಿದ್ದಾರೆ. ಅವರು ಜನಕಪುರಿ ಕನ್ನಡ ಕೂಟದ ಅಧ್ಯಕ್ಷರಾಗಿದ್ದಾರೆ. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಕೂಡ ಅವರು ಕಾರ್ಯ ನಿರ್ವಹಿಸಿದ್ದಾರೆ.



**ಉಪಾಧ್ಯಕ್ಷೆ**
**ಆಶಾಲತಾ ಎಂ.**

ದೆಹಲಿ ಮೆಟ್ರೋ ರೈಲ್ವೇ ಕಾರ್ಪೋರೇಶನ್‌ನಲ್ಲಿ ಸ್ಟೇಷನ್ ಕಂಟ್ರೋಲರ್ ಆಗಿ ಕಾರ್ಯನಿರ್ವಹಿಸುತ್ತಿರುವ ಶ್ರೀಮತಿ ಆಶಾಲತಾ ಎಂ. ಅವರು ಪ್ರಥಮ ಬಾರಿ ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯಲ್ಲಿ ಉಪಾಧ್ಯಕ್ಷೆಯಾಗಿ ಆಯ್ಕೆಗೊಂಡಿದ್ದಾರೆ. ಸಾಹಿತ್ಯದಲ್ಲಿ ಪದವಿ ಮತ್ತು ಇಲೆಕ್ಟ್ರಿಕಲ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲೋಮ ಪಡೆದಿರುವ ಶ್ರೀಮತಿ ಆಶಾಲತಾ ಅವರು ಕ್ರೀಡೆ ಮತ್ತು ಸಾಂಸ್ಕೃತಿಕ ವಲಯದಲ್ಲಿ ಅತ್ಯುತ್ತಮ ಸಾಧನೆ ಮಾಡಿದ್ದಾರೆ.

**ಪ್ರಧಾನ ಕಾರ್ಯದರ್ಶಿ**
**ಸಿ.ಎಂ.ನಾಗರಾಜ**



ದೆಹಲಿ ಪೋಲೀಸ್ ಇಲಾಖೆಯಲ್ಲಿರುವ ಶ್ರೀ ಸಿ.ಎಂ.ನಾಗರಾಜ ಅವರು ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ಮತ್ತೊಮ್ಮೆ ಆಯ್ಕೆಯಾಗಿದ್ದಾರೆ. ಪ್ರಸ್ತುತ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ದೆಹಲಿ ಪೋಲೀಸ್ ಕಲ್ಯಾಣ ಸಮಿತಿಯಲ್ಲಿ ಕಾರ್ಯದರ್ಶಿಯಾಗಿ ಹಾಗೂ ದೆಹಲಿ ಒಕ್ಕಲಿಗ ಗೌಡ ಸಮಾಜದ ಖಜಾಂಚಿಯಾಗಿ ಸೇವೆ ಸಲ್ಲಿಸಿದ್ದಾರೆ.



**ಕೋಶಾಧಿಕಾರಿ**
**ಡಾ. ಅವನೀಂದ್ರನಾಥ್ ರಾವ್**

ಕೇಂದ್ರ ಸಂಸ್ಕೃತಿ ಸಚಿವಾಲಯದಲ್ಲಿ ಅಧಿಕಾರಿಯಾಗಿರುವ ಡಾ. ಅವನೀಂದ್ರನಾಥ್ ರಾವ್ ಅವರು ಮೊದಲ ಬಾರಿ ಸಂಘದ ಕಾರ್ಯಕಾರಿ ಸಮಿತಿಯಲ್ಲಿ ಕೋಶಾಧಿಕಾರಿಯಾಗಿ ಆಯ್ಕೆಯಾಗಿದ್ದಾರೆ. ಅವರು ಕನ್ನಡದಲ್ಲಿ ನಾಲ್ಕು ಕೃತಿಗಳನ್ನು ಪ್ರಕಟಿಸಿದ್ದಾರೆ. ಹತ್ತಾರು ನಾಟಕಗಳಲ್ಲಿ ಅಭಿನಯಿಸಿ ಬಹುಮಾನ ಪಡೆದಿದ್ದಾರೆ. ಸಾಹಿತ್ಯ ವಿಮರ್ಶೆಗೆ ಬಿ.ಎಂ.ಶ್ರೀ ಪ್ರತಿಷ್ಠಾನದ ಪುರಸ್ಕಾರ ಲಭಿಸಿದೆ. ಪ್ರಸ್ತುತ ದೆಹಲಿ ತುಳು ಸಿರಿ ಅಧ್ಯಕ್ಷರಾಗಿದ್ದಾರೆ.

**ಜಂಟಿ ಕಾರ್ಯದರ್ಶಿ**
**ಎಸ್.ಸಿ. ಹೇಮಲತಾ**



ಜಂಟಿ ಕಾರ್ಯದರ್ಶಿಯಾಗಿ ಆಯ್ಕೆಯಾಗಿರುವ ಶ್ರೀಮತಿ ಎಸ್.ಸಿ. ಹೇಮಲತಾ ಅವರು ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯೆಯಾಗಿದ್ದರು. ದೆಹಲಿ ಒಕ್ಕಲಿಗ ಸಂಘದ ಉಪಾಧ್ಯಕ್ಷೆಯಾಗಿಯೂ ಅವರು ಕಾರ್ಯ ನಿರ್ವಹಿಸಿದ್ದಾರೆ. ಕರ್ನಾಟಕದಲ್ಲಿ ಹಲವಾರು ಮಹಿಳಾ ಸ್ವಸಹಾಯ ಸಂಘಗಳನ್ನು ಸ್ಥಾಪಿಸಿ ಅವುಗಳ ಒಕ್ಕೂಟದ ಅಧ್ಯಕ್ಷೆಯಾಗಿದ್ದರು. ಅವರ ಹಲವಾರು ಕವನಗಳು, ಲೇಖನಗಳು ನಾಡಿನ ಹಲವಾರು ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ.



**ಜಂಟಿ ಕಾರ್ಯದರ್ಶಿ**
**ಟಿ.ಎಂ. ಮೈಲಾರಪ್ಪ**

ದೆಹಲಿ ಪೋಲಿಸ್ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಶ್ರೀ ಟಿ.ಎಂ. ಮೈಲಾರಪ್ಪ ಅವರು ಸಂಘದ ಜಂಟಿ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ. ಅವರು ಕಳೆದ ಬಾರಿ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾಗಿದ್ದರು. ಅವರು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಹಾಗೂ ದೆಹಲಿ ಪೋಲಿಸ್ ಕಲ್ಯಾಣ ಸಮಿತಿ ಮತ್ತು ಗಣೇಶ ಮಿತ್ರ ಮಂಡಳಿಗಳಲ್ಲಿ ಸಕ್ರಿಯರಾಗಿದ್ದಾರೆ.



**ಆಂಜನಿ ಗೌಡ**

ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಮತ್ತೊಮ್ಮೆ ಆಯ್ಕೆಯಾಗಿರುವ ಶ್ರೀ ಆಂಜನಿ ಗೌಡ ಅವರು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ಕಾರ್ಯಾಲಯದಲ್ಲಿ ಕೆಲಸ ಮಾಡಿದ ಅನುಭವವುಳ್ಳವರು. ಪ್ರಸ್ತುತ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಯಾಗಿರುವ ಅವರು ದೆಹಲಿ ಒಕ್ಕಲಿಗ ಗೌಡ ಸಮಾಜದ ಸಕ್ರಿಯ ಕಾರ್ಯಕರ್ತರೂ ಆಗಿದ್ದಾರೆ.

**ರಾಧಾಕೃಷ್ಣ**



ಕರ್ನಾಟಕ ಭವನದಲ್ಲಿ ಸೇವೆ ಸಲ್ಲಿಸುತ್ತಿರುವ ಶ್ರೀ ರಾಧಾಕೃಷ್ಣ ಅವರು ಮತ್ತೊಮ್ಮೆ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಆಯ್ಕೆಯಾಗಿದ್ದಾರೆ. ಪ್ರಸ್ತುತ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಸಮಿತಿಯ ಸದಸ್ಯರಾಗಿದ್ದಾರೆ. ಕರ್ನಾಟಕ ಕರಾವಳಿ ಮಿತ್ರ ಮಂಡಳಿಯ ಗೌರವ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದ್ದಾರೆ.



**ಪೂರ್ಣಿಮಾ ಗೌಡ**

ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಶ್ರೀಮತಿ ಪೂರ್ಣಿಮಾ ಗೌಡ ಅವರು ಮೊದಲ ಬಾರಿಗೆ ಆಯ್ಕೆಯಾಗಿದ್ದಾರೆ. ಸಂಘದ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತರಬೇತಿ ಪಡೆದು ಕಾರ್ಯಕ್ರಮ ನೀಡಿರುವ ಅವರು ದೆಹಲಿ ಒಕ್ಕಲಿಗ ಗೌಡ ಸಮಾಜದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದಾರೆ.

**ವಿ.ವಿ.ಬಿರಾದಾರ**



ಶ್ರೀ ವಿ.ವಿ.ಬಿರಾದಾರ ಅವರು ಕೇಂದ್ರ ಸಚಿವ ಶ್ರೀ ರೆಹಮಾನ್ ಖಾನ್ ಅವರ ಆಪ್ತ ಸಹಾಯಕರಾಗಿ ಕಾರ್ಯ ನಿರ್ವಹಿಸುತ್ತಿದ್ದು ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಆಯ್ಕೆಯಾಗಿದ್ದಾರೆ. ದೆಹಲಿ ಸಾಮಾಜಿಕ ಸುಧಾರಣಾ ಪ್ರಗತಿಶೀಲ ಸಂಸ್ಥೆಯ ಸಂಯೋಜಕ, ಬಸವ ಇಂಟರ್‌ನ್ಯಾಷನಲ್ ಸೆಂಟರ್‌ನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.



**ಪಿ.ಸಿ.ಶ್ರೀನಿವಾಸ್**

ದೆಹಲಿ ಪೋಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಶ್ರೀ ಪಿ.ಸಿ. ಶ್ರೀನಿವಾಸ್ ಅವರು ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಮತ್ತೊಮ್ಮೆ ಆಯ್ಕೆಯಾಗಿದ್ದಾರೆ. ಅವರು ದೆಹಲಿ ಕೃಷಿಕ್ ಸರ್ವೋದಯ ಫೌಂಡೇಶನ್‌ನ ಜಂಟೀ ಕಾರ್ಯದರ್ಶಿಯಾಗಿ ಹಾಗೂ ದೆಹಲಿ ಒಕ್ಕಲಿಗ ಗೌಡ ಸಮಾಜದ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದ್ದಾರೆ.

**ಆನಂದ ಈಶ್ವರಪ್ಪ ಮುರಗೋಡ**



ಕೇಂದ್ರೀಯ ರಸ್ತೆ ಸಾರಿಗೆ ಮತ್ತು ಹೈವೇ ಸಚಿವಾಲಯದಲ್ಲಿ ಸಹಾಯಕರಾಗಿ ಕಾರ್ಯ ನಿರ್ವಹಿಸುತ್ತಿರುವ ಶ್ರೀ ಆನಂದ ಈಶ್ವರಪ್ಪ ಮುರಗೋಡ ಅವರು ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಮತ್ತೊಮ್ಮೆ ಆಯ್ಕೆಯಾಗಿದ್ದಾರೆ. ಪ್ರತಿಭಾವಂತ ಫೋಟೋಗ್ರಾಫರ್ ಆಗಿರುವ ಇವರಿಗೆ ಮೂರು ಬಾರಿ ರಾಷ್ಟ್ರೀಯ ಪ್ರಶಸ್ತಿ ಲಭಿಸಿದೆ.



**ಆಶಾ ಶ್ಯಾಮಸುಂದರ್**

ಶ್ರೀಮತಿ ಆಶಾ ಶ್ಯಾಮಸುಂದರ್ ಅವರು ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಮೊದಲ ಬಾರಿಗೆ ಆಯ್ಕೆಯಾಗಿದ್ದಾರೆ. ದಿನಕರ ರಂಗತಂಡದ ಸದಸ್ಯೆಯಾಗಿರುವ ಅವರು ನಾಟಕ ನಿರ್ದೇಶನಕ್ಕೆ ಬಹುಮಾನ ಪಡೆದಿದ್ದಾರೆ. ದೆಹಲಿ ಲೇಡಿಸ್ ಕ್ಲಬ್‌ನ ಕಾರ್ಯಕಾರಿ ಸಮಿತಿ ಸದಸ್ಯೆಯೂ ಆಗಿದ್ದಾರೆ.

**ಬಸವರಾಜ ಮೇಟಿ**



ಬಹುರಾಷ್ಟ್ರೀಯ ಕಂಪೆನಿಯೊಂದರಲ್ಲಿ ಹಿರಿಯ ಪ್ರಬಂಧಕರಾಗಿರುವ ಶ್ರೀ ಬಸವರಾಜ ಮೇಟಿ ಅವರು ಸಂಘದ ಖಜಾಂಚಿ ಹಾಗೂ ಸಮಿತಿಯ ಸದಸ್ಯರೂ ಆಗಿದ್ದರು. ಪ್ರಸ್ತುತ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷರಾಗಿದ್ದಾರೆ. ಬಸವ ಇಂಟರ್ ನ್ಯಾಶನಲ್ ಸೆಂಟರ್ ಹಾಗೂ ಗಣೇಶ ಮಿತ್ರ ಮಂಡಳಿಯಲ್ಲೂ ಸಕ್ರಿಯರಾಗಿದ್ದಾರೆ.

# ಕಾರ್ಯಕಾರಿ ಸಮಿತಿ ಸಭೆಗೆ ವಿಶೇಷ ಆಹ್ವಾನಿತರು

ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಸಭೆಗೆ ಹಿರಿಯ ಕನ್ನಡಿಗರಾದ ಶ್ರೀ ಐ. ರಾಮ ಮೋಹನ್ ರಾವ್, ಶ್ರೀ ಎಸ್. ಎಸ್. ಜವಳಿ, ಡಾ. ಪುರುಷೋತ್ತಮ ಬಿಳಿಮಲೆ, ಶ್ರೀ ಅರವಿಂದ ಕೌಜಲಗಿ ಅವರನ್ನು ವಿಶೇಷ ಆಮಂತ್ರಿತರನ್ನಾಗಿ ಆಹ್ವಾನಿಸಲಾಗುವುದು.



**ಐ. ರಾಮ ಮೋಹನ್ ರಾವ್**

ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷ ಶ್ರೀ ಐ. ರಾಮ ಮೋಹನ್ ರಾವ್ ಅವರು ಭಾರತ ಸರಕಾರದಲ್ಲಿ ಸುದೀರ್ಘ ಸೇವೆ ಸಲ್ಲಿಸಿ ಇದೀಗ ಎ.ಎನ್.ಐ. ಸುದ್ದಿ ಸಂಸ್ಥೆಯಲ್ಲಿ ಸಂಪಾದಕರಾಗಿದ್ದಾರೆ. ಅವರು ನಾಲ್ವರು ಪ್ರಧಾನಿಗಳ ವಾರ್ತಾ ಸಲಹೆಗಾರರೂ ಆಗಿದ್ದರು.

**ಶರತ್ ಎಸ್. ಜವಳಿ**



ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲರಾಗಿರುವ ಶ್ರೀ ಶರತ್ ಎಸ್. ಜವಳಿ ಅವರು ದೆಹಲಿಯ ಹಿರಿಯ ತಲೆಮಾರಿನ ಕನ್ನಡಿಗರಲ್ಲೊಬ್ಬರು. ಅಜ್ಮೇರ್‌ನಲ್ಲಿರುವ ಮಾಯೋ ಕಾಲೇಜಿನ ಆಡಳಿತ ಮಂಡಳಿ ಮತ್ತು ಇನ್ನಿತರ ಸಂಘ ಸಂಸ್ಥೆಗಳಲ್ಲಿ ಅವರು ಕ್ರಿಯಾಶೀಲರಾಗಿದ್ದಾರೆ.



**ಡಾ. ಪುರುಷೋತ್ತಮ ಬಿಳಿಮಲೆ**

ಖ್ಯಾತ ಜಾನಪದ ವಿದ್ವಾಂಸ, ಅಂಕಣಕಾರ ಹಾಗೂ ವಿಮರ್ಶಕ ಡಾ. ಪುರುಷೋತ್ತಮ ಬಿಳಿಮಲೆ ಅವರು ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷರು. ಅಮೇರಿಕನ್ ಇನ್‌ಸ್ಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್ ನಲ್ಲಿ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

**ಅರವಿಂದ ಕೌಜಲಗಿ**



ಕನ್ನಡ ಭಾರತಿ ಸೇರಿದಂತೆ ರಂಗಭೂಮಿ ಮತ್ತು ಕನ್ನಡ ಚಟುವಟಿಕೆಗಳಲ್ಲಿ ಕ್ರಿಯಾಶೀಲರಾಗಿರುವ ಶ್ರೀ ಅರವಿಂದ ಕೌಜಲಗಿ ಅವರು ವೃತ್ತಿಯಲ್ಲಿ ಇಂಜಿನಿಯರ್. ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿ ಕನ್ನಡ ಶಾಲೆಯ ಆಡಳಿತ ಹಾಗೂ ಕಾರ್ಯಕ್ರಮಗಳಲ್ಲೂ ಅವರು ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

## ಹೊಸ ಸಮಿತಿ ಸದಸ್ಯರ ನೇಮಕ

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಸಂಘದ ನಿಯಮಾವಳಿ ಪ್ರಕಾರ ಸಂಘದ ಕಾರ್ಯಕಾರಿ ಸಮಿತಿಗೆ ಶ್ರೀ ಟಿ.ಪಿ. ಬೆಳ್ಳಿಯಪ್ಪ ಮತ್ತು ಶ್ರೀಮತಿ ಕುಸುಮಾ ಪಿ. ನಂದರಗಿ ಅವರನ್ನು ಸದಸ್ಯರನ್ನಾಗಿ ನಾಮಕರಣ ಮಾಡಿದ್ದಾರೆ.



**ಟಿ.ಪಿ.ಬೆಳ್ಳಿಯಪ್ಪ**

ದೆಹಲಿ ಪೋಲೀಸ್ ಇಲಾಖೆಯಲ್ಲಿ ಸೇವೆಯಲ್ಲಿರುವ ಟಿ.ಪಿ.ಬೆಳ್ಳಿಯಪ್ಪ ಅವರು ಅಖಿಲ ಭಾರತ ಮತ್ತು ಅಂತರ್ ರಾಜ್ಯ ಪೋಲೀಸ್ ಕ್ರೀಡಾ ಕೂಟಗಳಲ್ಲಿ ಹಾಕಿಯನ್ನು ಪ್ರತಿನಿಧಿಸಿದ್ದಾರೆ. ದೆಹಲಿ ಒಕ್ಕಲಿಗ ಗೌಡ ಸಂಘ ಮತ್ತು ದೆಹಲಿ ಪೋಲೀಸ್ ಕಲ್ಯಾಣ ಸಮಿತಿಯ ಪದಾಧಿಕಾರಿಯಾಗಿ ದುಡಿದಿದ್ದಾರೆ.

**ಕುಸುಮಾ ಪಿ. ನಂದರಗಿ**



ಶ್ರೀಮತಿ ಕುಸುಮಾ ಪಿ. ನಂದರಗಿ ಅವರು ಕರ್ನಾಟಕ ಭವನದಲ್ಲಿ ಕಚೇರಿ ಅಧೀಕ್ಷಕರಾಗಿ ಕೆಲಸ ನಿರ್ವಹಿಸುತ್ತಿದ್ದು ಈ ಹಿಂದೆ ಬಾಗಲಕೋಟೆ ನಗರ ಸಭೆಯ ಉಪಾಧ್ಯಕ್ಷೆ ಹಾಗೂ ಸದಸ್ಯೆಯಾಗಿ ಸಮಾಜ ಸೇವೆ ಸಲ್ಲಿಸಿದ್ದಾರೆ.

## ಉಪ ಸಮಿತಿ ರಚನೆ

ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯು ಇತ್ತೀಚೆಗೆ ನಡೆದ ಸಭೆಯಲ್ಲಿ ಕಟ್ಟಡ ಉಪಸಮಿತಿ ಮತ್ತು ಅಭಿಮತ ಸಂಪಾದಕ ಮಂಡಳಿಗಳನ್ನು ರಚಿಸಿದೆ.

ಅದರಂತೆ **ಕಟ್ಟಡ ಉಪಸಮಿತಿಯಲ್ಲಿ** ಶ್ರೀ ಎನ್.ಎ. ಮಾಧವ, ಶ್ರೀ ಪ್ರದೀಪ್ ಕುಮಾರ್ ಮತ್ತು ಶ್ರೀ ಮಿಥುನ್ ಶೆಟ್ಟಿ ಅವರು ಸದಸ್ಯರಾಗಿರುತ್ತಾರೆ.

**ಅಭಿಮತ ಸಂಪಾದಕ ಮಂಡಳಿಗೆ** ಶ್ರೀ ಬಾಲಕೃಷ್ಣ ನಾಯ್ಕ್ ಡಿ., ಶ್ರೀಮತಿ ಸವಿತಾ ಇನಾಂದಾರ್ ಮತ್ತು ಶ್ರೀ ಪ್ರಕಾಶ್ ಶೆಟ್ಟಿ ಉಳೆಪಾಡಿ ಅವರು ಸದಸ್ಯರಾಗಿರುತ್ತಾರೆ. ಅ



## ಉಚಿತ ವೈದ್ಯಕೀಯ ತಪಾಸಣೆ



**ಡಾ.ನಿರಂಜನ್ ನಾಯ್ಕ್ ಅವರಿಂದ ಇದೇ ಆಗಸ್ಟ್ 18 ಭಾನುವಾರ ಸಂಜೆ 4ರಿಂದ ದೆಹಲಿ ಕರ್ನಾಟಕ ಸಂಘದಲ್ಲಿ ಕ್ಯಾನ್ಸರ್ ಸಂಬಂಧಿತ ಕಾಯಿಲೆಗಳಿಗೆ ಉಚಿತ ಸಲಹೆ ನೀಡಲಿದ್ದಾರೆ.**

ದೆಹಲಿಯ ವಸುಂಧರಾ ಎನ್‌ಕ್ಲೇವ್‌ನಲ್ಲಿರುವ ಧರ್ಮಶೀಲಾ ಹಾಸ್ಪಿಟಲ್ ಮತ್ತು ರಿಸರ್ಚ್ ಸೆಂಟರ್‌ನಲ್ಲಿ ಸರ್ಜಿಕಲ್ ಆನ್‌ಕಲಾಜಿಯ ಹಿರಿಯ ಕನ್ಸಲ್ಟೆಂಟ್ ಆಗಿರುವ ಡಾ.ನಿರಂಜನ್ ನಾಯ್ಕ್ ಅವರು ಪ್ರತಿಷ್ಠಿತ ಆಲ್ ಇಂಡಿಯಾ ಇನ್‌ಸ್ಟ್ಯೂಟ್ ಆಫ್ ಮೆಡಿಕಲ್ ಸಯನ್ಸ್‌ನ ಎಂ.ಎಸ್. ಪದವೀಧರರು. ಅವರು ಬೆಂಗಳೂರು ಮೆಡಿಕಲ್ ಕಾಲೇಜಿನಲ್ಲಿ ಎಂ.ಬಿ.ಬಿ.ಎಸ್. ಓದಿದ್ದಾರೆ.

**ಆಗಸ್ಟ್ 25, 2013ರ ಭಾನುವಾರದಂದು ಡಾ.ಭೀಮ್ ಭಟ್ ಅವರಿಂದ ಉಚಿತ ವೈದ್ಯಕೀಯ ತಪಾಸಣೆ ನಡೆಯಲಿದೆ. ದೆಹಲಿ ಕನ್ನಡಿಗರು ಈ ವೈದ್ಯಕೀಯ ಸೇವೆಯನ್ನು ಸದುಪಯೋಗ ಪಡಿಸಿಕೊಳ್ಳಬೇಕಾಗಿ ವಿನಂತಿ.**

## ಸಂಘದ ಬೆಳವಣಿಗೆ ಕುರಿತು

# ಮಾಧ್ಯಮದೊಂದಿಗೆ ಚರ್ಚೆ

ದೆಹಲಿ ಕರ್ನಾಟಕ ಸಂಘದ ನೂತನ ಕಾರ್ಯಕಾರಿ ಸಮಿತಿಯು ದೆಹಲಿಯಲ್ಲಿರುವ ಕನ್ನಡಿಗ ಮಾಧ್ಯಮ ಮಿತ್ರರೊಂದಿಗೆ 'ಪರಸ್ಪರ' ಮುಖಾಮುಖಿ ಕಾರ್ಯಕ್ರಮವನ್ನು ಇದೇ ಜುಲೈ 26ರಂದು ನಡೆಸಿತು.

ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಮುಂದಿನ ಎರಡು ವರ್ಷಗಳ ಕಾಲ ದೆಹಲಿ ಕರ್ನಾಟಕ ಸಂಘವು ಹಮ್ಮಿಕೊಂಡಿರುವ ಅಭಿವೃದ್ಧಿ ಕಾರ್ಯಗಳ ಕುರಿತು ಮಾಹಿತಿ ನೀಡಿದರು. ಸಾಂಸ್ಕೃತಿಕ, ಸಾಹಿತ್ಯಿಕ, ಸಾಮಾಜಿಕ ಹಾಗೂ ಮನೋರಂಜನಾತ್ಮಕ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸುವುದರ ಮೂಲಕ ದೆಹಲಿ ಕರ್ನಾಟಕ ಸಂಘವನ್ನು ಒಂದು ಸಾಂಸ್ಕೃತಿಕ ಕೇಂದ್ರವನ್ನಾಗಿ ಮಾಡಬೇಕೆಂಬ ಸಂಕಲ್ಪವನ್ನು ಹೊಂದಿದ್ದೇವೆ ಎಂದು ಅವರು ಹೇಳಿದರು. ಇದೇ ಸಂದರ್ಭದಲ್ಲಿ ಅವರು ಸಂಘದ ಬೆಳವಣಿಗೆಗೆ ಮಾಧ್ಯಮ ಮಿತ್ರರ ಸಲಹೆ ಮತ್ತು ಸಹಕಾರವನ್ನು ಕೋರಿದರು. ಆರಂಭದಲ್ಲಿ ಶ್ರೀ ವಸಂತ ಶೆಟ್ಟಿ ಅವರು ಹೊಸ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಮಾಧ್ಯಮ ಮಿತ್ರರಿಗೆ ಪರಿಚಯಿಸಿದರು.





ಹಿರಿಯ ಪತ್ರಕರ್ತ, ವಿಜಯ ಕರ್ನಾಟಕ ದಿನಪತ್ರಿಕೆಯ ದೆಹಲಿಯ ಪ್ರತಿನಿಧಿ ಶ್ರೀ ಡಿ. ಉಮಾಪತಿ ಅವರು ಮಾತನಾಡಿ ಎಲ್ಲ ಕನ್ನಡಿಗರು ಒಂದಾಗಿ ಕನ್ನಡದ ಕೆಲಸಗಳಲ್ಲಿ ತೊಡಗಿಸಿಕೊಂಡು ಸಂಘ ತನ್ನ ಘನತೆಯನ್ನು ಎತ್ತಿ ಹಿಡಿಯುವಂತೆ ನೋಡಿಕೊಳ್ಳಬೇಕೆಂದು ಆಶಿಸಿದರು.

ಔಟ್‌ಲುಕ್ ಇಂಗ್ಲಿಷ್ ವಾರಪತ್ರಿಕೆಯ ಸಂಪಾದಕ ಶ್ರೀ ಕೃಷ್ಣಪ್ರಸಾದ್ ಅವರು ಕರ್ನಾಟಕದ ವಿಶಿಷ್ಟತೆಯನ್ನು ಸಾರುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಜೊತೆಗೆ ನಾಡಿನ ಸಮಸ್ಯೆಗೆ ಸ್ಪಂದಿಸುವ ಕಾರ್ಯವನ್ನು ಸಂಘ ನಡೆಸಬೇಕು ಎಂದು ಅಭಿಪ್ರಾಯಪಟ್ಟರು. ದೆಹಲಿ ಕರ್ನಾಟಕ ಸಂಘವು ಇತರ ರಾಜ್ಯಗಳ ಜನರೊಂದಿಗೆ ಸೌಹಾರ್ದಯುತ ಸಂಬಂಧವನ್ನು ಬೆಳೆಸಿಕೊಳ್ಳುವುದರ ಜತೆಗೆ ಕೇಂದ್ರ ಸರಕಾರವು ಕರ್ನಾಟಕದಲ್ಲಿ ಅಭಿವೃದ್ಧಿಪರ ಚಟುವಟಿಕೆಗಳನ್ನು ನಡೆಸುವಂತೆ ಒತ್ತಾಯಿಸುವ ಒಂದು ಪ್ರಭಾವಿ ಶಕ್ತಿಯಾಗಿ ಬೆಳೆಯಬೇಕು ಎಂದೂ ಮಾಧ್ಯಮ ಮಿತ್ರರು ಅಭಿಪ್ರಾಯಪಟ್ಟರು.

ಪ್ರಜಾವಾಣಿಯ ದೆಹಲಿ ಪ್ರತಿನಿಧಿ, ಅಂಕಣಕಾರ ಹೊನಕೆರೆ ನಂಜುಂಡೇಗೌಡ, ಸಂಯುಕ್ತ ಕರ್ನಾಟಕ ದಿನಪತ್ರಿಕೆಯ ಶ್ರೀ ವಿಶ್ವನಾಥ್ ಕುಲಕರ್ಣಿ, ಡೆಕ್ಕನ್ ಹೆರಾಲ್ಡ್ ದಿನಪತ್ರಿಕೆಯ ಶ್ರೀ ಅಜಿತ್ ಅತ್ರಾಡಿ, ಇಂಡಿಯಾ ಟುಡೇ ಸಮೂಹದ ಶ್ರೀ ಸೆಬಾಸ್ಟಿಯನ್ ಟಿ.ಪಿ., ಸುವರ್ಣ ನ್ಯೂಸ್ ಸುದ್ದಿ ಚಾನೆಲ್‌ನ ಶ್ರೀ ಪ್ರಶಾಂತ್ ನಾತು ಮತ್ತು ಶ್ರೀ ಇಂದ್ರಜಿತ್, ದಿ ಹಿಂದೂ ಬಿಸಿನೆಸ್ ಲೈನ್ ದಿನಪತ್ರಿಕೆಯ ಶ್ರೀ ವಿಶ್ವನಾಥ್ ಕುಲಕರ್ಣಿ, ಉದಯವಾಣಿ ದಿನಪತ್ರಿಕೆಯ ಶ್ರೀ ರಾಕೇಶ್ ಎನ್.ಎಸ್., ವಿಜಯವಾಣಿ ದಿನಪತ್ರಿಕೆಯ ಶ್ರೀ ರಾಘವ ಶರ್ಮಾ, ಟಿ.ವಿ–9 ಸುದ್ದಿ ಚಾನೆಲ್‌ನ ಶ್ರೀ ಚಂದ್ರಮೋಹನ್ ಮತ್ತು ಶ್ರೀ ಪ್ರದೀಪ್ ಕುಮಾರ್, ಜನಶ್ರೀ ಸುದ್ದಿ ಚಾನೆಲ್‌ನ ಶ್ರೀ ಮಧು ನಾಯಕ್ ಮೊದಲಾದವರು ಯೋಗ್ಯ ಸಲಹೆಗಳನ್ನು ನೀಡಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ, ಉಪಾಧ್ಯಕ್ಷರುಗಳಾದ ಶ್ರೀ ಬಿ.ಕೆ. ಬಸವರಾಜು ಮತ್ತು ಶ್ರೀಮತಿ ಆಶಾಲತಾ, ಕೋಶಾಧಿಕಾರಿ ಡಾ. ವೈ. ಅವನೀಂದ್ರನಾಥ್ ರಾವ್, ಜತೆ ಕಾರ್ಯದರ್ಶಿಗಳಾದ ಶ್ರೀಮತಿ ಎಸ್.ಸಿ. ಹೇಮಲತಾ ಮತ್ತು ಶ್ರೀ ಟಿ.ಎಂ. ಮೈಲಾರಪ್ಪ, ಸಂಘದ ಮುಖವಾಣಿ 'ಅಭಿಮತ'ದ ಪ್ರಧಾನ ಸಂಪಾದಕ ಶ್ರೀ ಬಾಲಕೃಷ್ಣ ನಾಯ್ಕ್ ಡಿ., ಶ್ರೀಮತಿ ಸವಿತಾ ಇನಾಂದಾರ್ ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರು ಭಾಗವಹಿಸಿದ್ದರು. ಅ

***ಡಾ. ವೈ. ಅವನೀಂದ್ರನಾಥ್ ರಾವ್***



# ಅಭಿನಂದನೆ



ಮಾನ್ಯ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರೇ,

ದೆಹಲಿ ಕರ್ನಾಟಕ ಸಂಘದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಸಂದರ್ಭದಲ್ಲಿ ನನ್ನ ಹಾರ್ದಿಕ ಶುಭಾಶಯಗಳು.

ರಾಷ್ಟ್ರದ ರಾಜಧಾನಿಯಾದ ದೆಹಲಿಯಲ್ಲಿನ ಕರ್ನಾಟಕ ಸಂಘವು ಹಲವು ವರ್ಷಗಳಿಂದ ಕನ್ನಡ ನಾಡು, ನುಡಿಗೆ, ಕಲೆ ಮತ್ತು ಸಂಸ್ಕೃತಿಗೆ ಅಪಾರ ಮತ್ತು ಅಮೂಲ್ಯ ಸೇವೆಯನ್ನು ಸಲ್ಲಿಸುತ್ತಾ ಬಂದಿದೆ. ತಮ್ಮ ಸಂಘವು ಕನ್ನಡದ ಕಂಪನ್ನು ರಾಜಧಾನಿಯಲ್ಲಿ ಹರಡುವಲ್ಲಿ ಅತ್ಯಂತ ಯಶಸ್ಸು ಕಂಡಿದೆ. ದೆಹಲಿ ಕರ್ನಾಟಕ ಸಂಘದ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸಿ, ನಿಮ್ಮ ಕಾರ್ಯಗಳನ್ನು ಮೆಚ್ಚಿ ಪ್ರೋತ್ಸಾಹಿಸುವ ಸದವಕಾಶ ನನಗೆ ಲಭಿಸಿತ್ತು.

ನಿಮ್ಮ ಅಧಿಕಾರ ಅವಧಿಯಲ್ಲಿ ದೆಹಲಿ ಕರ್ನಾಟಕ ಸಂಘದ ಯಶಸ್ವಿಯಾಗಿ ನೆರವೇರಲೆಂದು ಶುಭ ಹಾರೈಸುತ್ತೇನೆ.

***ಪಿ.ಜಿ.ಆರ್. ಸಿಂಧ್ಯ***
*ಮಾಜಿ ಸಚಿವರು, ಬೆಂಗಳೂರು*

ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರೇ,

ರಾಷ್ಟ್ರದ ರಾಜಧಾನಿ ದೆಹಲಿಯ ಕನ್ನಡಿಗರ ಸಾಂಸ್ಕೃತಿಕ ಒಕ್ಕೂಟವಾದ ಪ್ರತಿಷ್ಠಿತ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾಗಿ ಆಯ್ಕೆಯಾದುದು ನಾವೆಲ್ಲರೂ ಸಂಭ್ರಮಿಸುವ ವಿಷಯ. ಅದರಲ್ಲೂ ವಿಶೇಷವಾಗಿ ದಕ್ಷಿಣ ಕನ್ನಡ ಜಿಲ್ಲೆಯವರಾಗಿ ನಿಮ್ಮ ಆಯ್ಕೆ ನಮಗೆ ಅಭಿಮಾನಾಸ್ಪದ.

ವಿಭಿನ್ನ ಕ್ಷೇತ್ರಗಳಲ್ಲಿ ನಿಮಗಿರುವ ಅನುಭವ, ಯೋಗ್ಯತೆ, ಸಾಮಾರ್ಥ್ಯಗಳಿಂದ ಸಂಘದ ಚಟುವಟಿಗೆಗಳಿಗೆ ಹೊಸ ವೇಗ ಮತ್ತು ತೇಜಸ್ಸನ್ನು ನೀವು ನೀಡುವಿರಿ ಎಂಬುದು ನಮ್ಮ ಸದಾಶಯ.

ಜಿಲ್ಲಾ ಕನ್ನಡ ಪರಿಷತ್ತು ಮತ್ತು ಕಲ್ಕೂರ ಪ್ರತಿಷ್ಠಾನಗಳ ಪರವಾಗಿ ನಿಮ್ಮನ್ನು ಅಭಿನಂದಿಸುತ್ತಾ ಕನ್ನಡ, ತುಳು ಭಾಷೆಯ, ಸಂಸ್ಕೃತಿಯ ಯಾವತ್ತೂ ಯೋಚನೆ, ಯೋಜನೆ ಮತ್ತು ಅನುಷ್ಠಾನಗಳಿಗೆ ನಾವು ನಿಮ್ಮೊಂದಿಗಿದ್ದೇವೆ.

***ಎಸ್. ಪ್ರದೀಪ್ ಕುಮಾರ್ ಕಲ್ಕೂರ***
*ಅಧ್ಯಕ್ಷರು, ದ.ಕ. ಜಿಲ್ಲಾ ಕನ್ನಡ ಪರಿಷತ್ತು ಮತ್ತು ಕಲ್ಕೂರ ಪ್ರತಿಷ್ಠಾನ, ಮಂಗಳೂರು*

ಶ್ರೀ ಸಿ.ಎಂ. ನಾಗರಾಜ್ ಅವರೇ,

ದೆಹಲಿ ಕರ್ನಾಟಕ ಸಂಘ ಇದರ ನೂತನ ಅಧ್ಯಕ್ಷರಾಗಿ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಮತ್ತು ತಾವು ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾಗಿರುವುದಕ್ಕಾಗಿ ಹಾರ್ದಿಕ ಶುಭಾಷಯಗಳು.

ತಮ್ಮ ನೇತೃತ್ವ ಮತ್ತು ಮಾರ್ಗದರ್ಶನದಲ್ಲಿ ಸಂಘದ ಕಾರ್ಯಚಟುವಟಿಕೆಗಳು ಯಶಸ್ವಿಯಾಗಿ ಕಾರ್ಯ ಸಿದ್ಧಿಯಾಗಲೆಂದು, ನಾಡು ನುಡಿ ಸಂಸ್ಕೃತಿ ಉಳಿಸಿ, ಗಳಿಸುವಲ್ಲಿ ತಮ್ಮ ಕಲಾ ಸೇವೆ ಇದೇ ರೀತಿ ಮುಂದುವರೆಯಲೆಂದು ಹಾಗೂ ಕನ್ನಡ ಸಂಸ್ಕೃತಿ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಅಕಾಡೆಮಿಗಳ ಸಹಯೋಗದಲ್ಲಿ ಕನ್ನಡ ಕಟ್ಟುವ ಕೈಂಕರ್ಯ ಆಗುವುದೆಂದು ಆಶಿಸುತ್ತೇನೆ.

***ಟಿ.ಜಿ. ನರಸಿಂಹ ಮೂರ್ತಿ***
*ರಿಜಿಸ್ಟ್ರಾರ್ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಬೆಂಗಳೂರು*

ಶ್ರೀ ಸಿ.ಎಂ. ನಾಗರಾಜ್ ಅವರೇ,

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾಗಿ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಮತ್ತು ಪ್ರಧಾನ ಕಾರ್ಯದರ್ಶಿಗಳಾಗಿ ತಾವು ಆಯ್ಕೆಯಾಗಿರುವುದಕ್ಕೆ ಕರ್ನಾಟಕ ಚಲನಚಿತ್ರ ಅಕಾಡೆಮಿ ಪರವಾಗಿ ಅಭಿನಂದನೆಗಳು.

ತಮ್ಮ ಸಂಘದಲ್ಲಿ ಬೆಳ್ಳಿ ಮಂಡಲ ಘಟಕದ ಸಂಚಾಲಕರೂ ಆಗಿರುವ ತಾವು ಅಕಾಡೆಮಿ ಚಟುವಟಿಕೆಗಳನ್ನು ಹಮ್ಮಿ ಕೊಳ್ಳಬೇಕೆಂದು, ಸದಭಿರುಚಿಯ ಚಿತ್ರ ಸಂಸ್ಕೃತಿಯನ್ನು ಪಸರಿಸುವ ನಿಟ್ಟಿನಲ್ಲಿ ಅಕಾಡೆಮಿ ಜೊತೆ ಕೈಜೋಡಿಸಲು ಕೋರಿದೆ.

ಇನ್ನೊಮ್ಮೆ ತಮಗೆ, ಅಧ್ಯಕ್ಷರಿಗೆ ಹಾಗೂ ಸಂಘದ ಪದಾಧಿಕಾರಿಗಳಿಗೆ ಅಭಿನಂದನೆಗಳು.

***ಜಗನ್ನಾಥ್ ಪ್ರಕಾಶ್***
*ರಿಜಿಸ್ಟ್ರಾರ್, ಕರ್ನಾಟಕ ಚಲನಚಿತ್ರ ಅಕಾಡೆಮಿ, ಬೆಂಗಳೂರು*





## ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಶನ್ ವತಿಯಿಂದ ಅಭಿನಂದನೆ

ದೆಹಲಿ ಕರ್ನಾಟಕ ಸಂಘದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರನ್ನು ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಶನ್ ವತಿಯಿಂದ ಇದೇ ಜುಲೈ 17ರಂದು ಅಭಿನಂದಿಸಲಾಯಿತು. ಸ್ನೇಹಾದ ಸದಸ್ಯೆಯರಾದ ಶ್ರೀಮತಿ ಎಸ್.ಸಿ. ಹೇಮಲತಾ ಮತ್ತು ಶ್ರೀಮತಿ ಆಶಾ ಶ್ಯಾಮಸುಂದರ್ ಅವರು ಕ್ರಮವಾಗಿ ದೆಹಲಿ ಕರ್ನಾಟಕ ಸಂಘದ ಜಂಟಿ ಕಾರ್ಯದರ್ಶಿ ಮತ್ತು ಸಮಿತಿ ಸದಸ್ಯೆಯಾಗಿ ಆಯ್ಕೆಯಾದ ಸಂದರ್ಭದಲ್ಲಿ ಅವರನ್ನೂ ಅಭಿನಂದಿಸಲಾಯಿತು. ಸ್ನೇಹಾದ ಅಧ್ಯಕ್ಷೆ ಶ್ರೀಮತಿ ಆಶಾ ಕರಿಯಪ್ಪ, ಖಜಾಂಚಿ ಶ್ರೀಮತಿ ರಾಜೇಶ್ವರಿ ಕಲ್ಲೂರ, ಶ್ರೀಮತಿ ಸುಷ್ಮಾ ಭಿಡೆ ಮತ್ತು ಸ್ನೇಹಾದ ಸದಸ್ಯೆಯರು ಉಪಸ್ಥಿತರಿದ್ದರು.

## ಜನಕಪುರಿ ಕನ್ನಡ ಕೂಟದ ವತಿಯಿಂದ ಅಭಿನಂದನೆ

ದೆಹಲಿ ಕರ್ನಾಟಕ ಸಂಘದ ನೂತನ ಅಧ್ಯಕ್ಷರಾಗಿ ಆಯ್ಕೆ ಗೊಂಡಿರುವ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಉಪಾಧ್ಯಕ್ಷ ಶ್ರೀ ಬಿ.ಕೆ. ಬಸವರಾಜು ಹಾಗೂ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರನ್ನು ಇದೇ ಜುಲೈ 21ರಂದು ಜನಕಪುರಿ ಕನ್ನಡ ಕೂಟದ ವಾರ್ಷಿಕ ಮಹಾಸಭೆಯ ಸಂದರ್ಭದಲ್ಲಿ ಕೂಟದ ಅಧ್ಯಕ್ಷರಾದ ಶ್ರೀ ಎಸ್. ಎಲ್. ಭಂಡಾರ್ಕರ್ ಅವರು ಹೂಗುಚ್ಛ ನೀಡಿ ಸನ್ಮಾನಿಸಿದರು.

## ದೆಹಲಿ ತುಳುಸಿರಿ ವತಿಯಿಂದ ಅಭಿನಂದನೆ

ದೆಹಲಿ ಕರ್ನಾಟಕ ಸಂಘದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಕೋಶಾಧಿಕಾರಿಯಾಗಿ ಆಯ್ಕೆಯಾದ ಡಾ. ವೈ. ಅವನೀಂದ್ರನಾಥ್ ರಾವ್ ಮತ್ತು ಸಮಿತಿ ಸದಸ್ಯೆ ಶ್ರೀಮತಿ ಪೂರ್ಣಿಮ ಗೌಡ ಅವರನ್ನು ದೆಹಲಿ ತುಳುಸಿರಿ ವತಿಯಿಂದ ಅಭಿನಂದಿಸಲಾಯಿತು. ಇದೇ ಜುಲೈ 21ರಂದು ನಡೆದ ತುಳುಸಿರಿಯ ಸಮಿತಿ ಸಭೆಯಲ್ಲಿ ಡಾ. ಪುರುಷೋತ್ತಮ ಬಿಳಿಮಲೆ, ಶ್ರೀ ಬಾಲಕೃಷ್ಣ ನಾಯ್ಕ್ ಡಿ. ಮತ್ತು ಡಾ. ಸಾಯಿ ಪ್ರಶಾಂತಿ ಶೆಟ್ಟಿ ಅವರು ವಿಜೇತರಿಗೆ ಹೂಗುಚ್ಛನೀಡಿ ಅಭಿನಂದಿಸಿದರು. ಸಭೆಯಲ್ಲಿ ದೆಹಲಿ ತುಳು ಸಿರಿ ಕಾರ್ಯದರ್ಶಿ ಶ್ರೀ ಅಲೋಕ್ ರೈ, ಶ್ರೀ ಕೆ.ಎಸ್.ಜಿ. ಶೆಟ್ಟಿ, ಶ್ರೀ ಕೆ.ಆರ್. ರಾಮಮೂರ್ತಿ, ಶ್ರೀ ಬಾಬುರಾಜ್ ಪೂಜಾರಿ, ಶ್ರೀ ಜಯಾನಂದ ಬಂಗೇರ ಮತ್ತು ಸಮಿತಿ ಸದಸ್ಯರು ಉಪಸ್ಥಿತರಿದ್ದರು.



**ಆಮಂತ್ರಣ**

# ದೆಹಲಿ ಕರ್ನಾಟಕ ಸಂಘದಲ್ಲಿ

**ಆಗಸ್ಟ್ 15, 2013– ಗುರುವಾರ**

**ಬೆಳಿಗ್ಗೆ 8 ಗಂಟೆಗೆ**

**ಸ್ವಾತ್ರಂತ್ರ್ಯ ದಿನಾಚರಣೆಯ** ಅಂಗವಾಗಿ
**ಧ್ವಜಾರೋಹಣ ಮತ್ತು ದೇಶಭಕ್ತಿಗೀತೆಗಳು**

**ಸಂಜೆ 5:00 ಗಂಟೆಗೆ**

2012–13 ರ ಅಂಬಿಕೇಶ್ ಸ್ಮಾರಕ
**ಕ್ರಿಕೆಟ್ ಪಂದ್ಯಾವಳಿಯಲ್ಲಿ**
ವಿಜೇತರಾದವರಿಗೆ
**ಬಹುಮಾನ ವಿತರಣೆ**

ಎಲ್ಲರಿಗೂ ಆದರದ **ಆಮಂತ್ರಣ**




**ಜಗದ್ಗುರು ಶ್ರೀಮನ್‌ಮಧ್ವಾಚಾರ್ಯ**
**ಮೂಲ ಮಹಾ ಸಂಸ್ಥಾನ**
**ಮಂತ್ರಾಲಯಂ ಶ್ರೀ ರಾಘವೇಂದ್ರ ಸ್ವಾಮಿ ಮಠ**
**ಶಾಖೆ: ಸೆಕ್ಟರ್–12, ಆರ್.ಕೆ.ಪುರಂ, ನವದೆಹಲಿ**

342ನೇ ಶ್ರೀ ರಾಘವೇಂದ್ರ ಸ್ವಾಮಿಗಳವರ
## ಆರಾಧನಾ ಮಹೋತ್ಸವ

21, 22 ಮತ್ತು 23 ಆಗಸ್ಟ್ 2013
23.08.2013ರಂದು ಸಂಜೆ 6 ಗಂಟೆಗೆ

## ಮೋಹಿನಿ ಭಸ್ಮಾಸುರ
## ನೃತ್ಯ ರೂಪಕ

ವಿಶ್ವವಿಖ್ಯಾತ ಸೂರ್ಯ ಕಲಾವಿದರು ಬೆಂಗಳೂರು ಇವರಿಂದ
**ಸ್ಥಳ : ದೆಹಲಿ ಕರ್ನಾಟಕ ಸಂಘದ ಸಭಾಂಗಣ**



## ಭಾರತದ ಭೂಶಿರ

# ನಮ್ಮ ಕಾಶ್ಮೀರ

ಆಗಸ್ಟ್ 15, ಭಾರತವಿಡೀ ತನ್ನ ಸ್ವಾತಂತ್ರ್ಯೋತ್ಸವವನ್ನು ಆಚರಿಸುತ್ತಾ ಸಂಭ್ರಮಿಸುವ ದಿನ. ಭಾರತದ ಉತ್ತರ ಭೂಶಿರ ಕಾಶ್ಮೀರದಲ್ಲಿ ಸ್ವಾತಂತ್ರ್ಯದ ವ್ಯಾಖ್ಯೆಯೇನು, ಅಲ್ಲಿನ ಜನರ ಬದುಕಿನಲ್ಲಿ ಆಗಸ್ಟ್ 15ರ ಸ್ವಾತಂತ್ರ್ಯ ಸಾಮಾನ್ಯ ದಿನಗಳಲ್ಲಿ ಯಾವ ರೀತಿ ಅನುಭೂತಿಯಾಗುತ್ತಿದೆ ಎಂಬ ಚಿತ್ರಣವನ್ನು ನೀಡುವ **ಅಭಿಮತ**ದ ಆಗಸ್ಟ್ ಸಂಚಿಕೆಗಾಗಿಯೇ ವಿಶೇಷ ಬರಹವನ್ನು ಅನುಭವಿ ಮಾಧ್ಯಮ ಕರ್ಮಿ, ಸುವರ್ಣ ನ್ಯೂಸ್ ಚಾನೆಲ್‌ನ ದೆಹಲಿ ಪ್ರತಿನಿಧಿ ***ಪ್ರಶಾಂತ್ ನಾತು*** ಅವರು ಬರೆದಿದ್ದಾರೆ.



ಭಾರತದ ಯಾವುದೇ ಪತ್ರಕರ್ತರಿಗೆ ಕಾಶ್ಮೀರದ ಬಗ್ಗೆ ಒಂದಿಷ್ಟು ಕುತೂಹಲ ಸಹಜ. ಭಾರತ ಪಾಕಿಸ್ತಾನ ಮತ್ತು ಚೀನಾ ಮೂರು ಪರಮಾಣು ರಾಷ್ಟ್ರಗಳ ನಡುವೆ ಸುತ್ತುವರಿದ ಕಷ್ಟಪನಿಂದ ನಿರ್ಮಿತ ಕಾಶ್ಮೀರ ಕಣಿವೆ ನಾವು ಪತ್ರಿಕೆಗಳನ್ನು ಓದಲು ಆರಂಭಿಸಿದಾಗಿನಿಂದ ಬಹುತೇಕ ದಿನವು ಮುಖಪುಟದಲ್ಲಿ ಕಾಣಸಿಗುವ ಹೆಸರು.

1989 ರಲ್ಲಿ ನಾವು ಶಾಲೆಗೆ ಹೋಗುವಾಗಲೇ ಕಾಶ್ಮೀರ ಹೊತ್ತಿ ಉರಿಯತೊಡಗಿತ್ತು. ಜಮ್ಮು ಮತ್ತು ಕಾಶ್ಮೀರಾದ ರಾಜಕಾರಣಿ ಮುಫ್ತಿ ಮೊಹಮ್ಮದ್ ಸೈಯದ್ ಅವರ ಪುತ್ರಿ ರುಬಿಯಾ ಅಪಹರಣ ಪ್ರಕರಣ, ಹಜರತ್‌ಬಾಲ್‌ನಲ್ಲಿ ಉಗ್ರರು ಅವಿತುಕೊಂಡ ಘಟನೆ, ಚರಾರ್–ಎ–ಷರೀಫ್ ಅನ್ನು ಸಂಪೂರ್ಣವಾಗಿ ಸುಟ್ಟು ಹಾಕಿದ ನಂತರ ಪಾಕಿ ಉಗ್ರ ಗುಲ್ ನನ್ನು ಪಾಕಿಸ್ತಾನದ ಮುಝಾಫರಾಬಾದ್‌ನಲ್ಲಿ ಮೆರವಣಿಗೆ ಮಾಡಿ ಸ್ವಾಗತಿಸಿದ ಘಟನೆ, ಅಮರನಾಥ್ ಯಾತ್ರಿಗಳ ಮೇಲಿನ ದಾಳಿ, ಜಮ್ಮು ಮತ್ತು ಕಾಶ್ಮೀರ ವಿಧಾನ ಸಭೆಯ ಮೇಲಿನ ಆತ್ಮಹತ್ಯಾ ದಾಳಿಯಿಂದ ಹಿಡಿದು ಕಳೆದ ವಾರ ಪ್ರಧಾನಿ ಭೇಟಿಯ ಹಿಂದಿನ ದಿನ ನಡೆದ ಸೈನಿಕರ ಮೇಲಿನ ದಾಳಿ ಹೀಗೆ ಇನ್ನುವರೆಗೂ ಕಾಶ್ಮೀರ ಅಂದರೆ ದೂರದಿಂದ ಗಮನಿಸುತ್ತಿದ್ದ ನಮಗೆಲ್ಲ ಉಗ್ರರ ಚಟುವಟಿಕೆಯ ತಾಣ.

ನಾನು ಶಾಲೆಗೆ ಹೋಗುತ್ತಿದ್ದಾಗ ಬಿಜೆಪಿ ನಾಯಕ ಮುರಳಿ ಮನೋಹರ ಜೋಷಿ ಶ್ರೀನಗರದ ಲಾಲ್‌ಚೌಕ್ ನಲ್ಲಿ ಉಗ್ರರ ಸವಾಲು ಸ್ವೀಕರಿಸಿ ರಾಷ್ಟ್ರ ಧ್ವಜ ಹಾರಿಸಲು ಹೊರಟಿದ್ದರು. ಅದೇ ಸುಮಾರಿಗೆ ಹುಬ್ಬಳ್ಳಿಯಲ್ಲಿ ಈದ್‌ಗಾ ಮೈದಾನದಲ್ಲಿ ರಾಷ್ಟ್ರಧ್ವಜ ಹಾರಿಸಲು ಹೊರಟಿದ್ದ ಕೆಲ ಯುವಕರನ್ನು ಪೊಲೀಸರು ಬಂಧಿಸಿದ್ದರು. ಕಾಶ್ಮೀರ ಲಾಲ್‌ಚೌಕ್, ಜಿಹಾದ್, ಜಮ್ಮು ಕಾಶ್ಮೀರ ಲಿಬೇರೆಶನ್ ಫ್ರಂಟ್, ಶೇಕ್ ಅಬ್ದುಲ್ಲಾ, ಪಾಕ್ ಆಕ್ರಮಿತ ಕಾಶ್ಮೀರದ ಕ್ಯಾಂಪ್ ಗಳು, ಆರ್ಟಿಕಲ್ 370 ರ ಬಗ್ಗೆ ಕೇಳಿ, ಗಮನಿಸಿ, ಓದಿಕೊಂಡಿದ್ದ ನಾನು ಇತ್ತೀಚೆಗೆ ಕಾಶ್ಮೀರಕ್ಕೆ ಹೋಗಿದ್ದೆ.

ನಾನು ಶ್ರೀನಗರ ವಿಮಾನ ನಿಲ್ದಾಣದಲ್ಲಿ ಇಳಿದಾಗ ಅವತ್ತು ಪ್ರಧಾನಿ ಮನಮೋಹನ್ ಸಿಂಗ್ ಹಾಗೂ ಯುಪಿಎ ಅಧ್ಯಕ್ಷೆ ಸೋನಿಯಾ ಗಾಂಧೀ ಕಾಶ್ಮೀರಕ್ಕೆ ಭೇಟಿ ನೀಡಿದ್ದರು. ವಿಮಾನ ನಿಲ್ದಾಣದ ಅಂಗಡಿಗಳಿಂದ ಹಿಡಿದು ದಲ್ ಸರೋವರದವರೆಗೂ ಎಲ್ಲವೂ ಬಂದ್. ಒಂದು ಕಡೆ ದೇಶದ ಪ್ರಧಾನಿ ಕಾಶ್ಮೀರಕ್ಕೆ ಹಣದ ಸುರಿಮಳೆ ಮಾಡುತ್ತಿದ್ದರೆ ಇನ್ನೊಂದು ಕಡೆ ಕಾಶ್ಮೀರದ ಜನತೆ ಪರಂಪರೆಯೇನೋ ಎಂಬಂತೆ ಅಂಗಡಿ ಮುಗ್ಗಟ್ಟುಗಳನ್ನು ಬಂದ್ ಮಾಡಿ "ಅಜಾದಿ" ಜಪ ಮಾಡುತ್ತಿದ್ದರು.

ಶ್ರೀನಗರದ ಹೆಜ್ಜೆ ಹೆಜ್ಜೆಗೂ ಕಾಶ್ಮೀರದ ಪೊಲೀಸರು, ರಾಷ್ಟ್ರೀಯ ರೈಫಲ್ಸ್ ಜವಾನರು, ಗಡಿ ಭದ್ರತಾ ಪಡೆಯ ಯೋಧರು, ಸಿಆರ್‌ಪಿಎಫ್ ತುಕಡಿಗಳು ಸುತ್ತುವರೆದು ಪ್ರಧಾನಿ ಪ್ರವಾಸಕ್ಕೆ ಭದ್ರತೆ ಒದಗಿಸಿದ್ದರೆ ಶ್ರೀನಗರದ ಜನತೆ ಮಾತ್ರ ಯಾರೋ ಶತ್ರುರಾಷ್ಟ್ರದ ಮುಖ್ಯಸ್ಥ ಬಂದ ರೀತಿಯಲ್ಲಿ ವ್ಯವಹಾರ ಮಾಡುತ್ತಿದ್ದರು.

ಒಂಭತ್ತು ವರ್ಷಗಳ ಹಿಂದೆ ಕಾಶ್ಮೀರಕ್ಕೆ ಪ್ರಧಾನಿ ಮನಮೋಹನ್ ಸಿಂಗ್ ನೀಡಿದ್ದು ಸುಮಾರು 37 ಸಾವಿರ ಕೋಟಿ ಪ್ಯಾಕೇಜ್. ಆದರೆ ಕಾಶ್ಮೀರದ ಜನತೆ ಒಬ್ಬ ದೇಶದ ಪ್ರಧಾನಿಯನ್ನು ಸ್ವಾಗತಿಸಿದ್ದು ಮಾತ್ರ ಇಡೀ ಕಣಿವೆಯನ್ನು ಬಂದ್ ಮಾಡುವುದರ ಮೂಲಕ.



**"ಭಾರತದಿಂದ ಸ್ವಾತಂತ್ರ್ಯ ನಮ್ಮ ಕನಸು. ಆದರೆ ಬಂದೂಕಿನಿಂದ ಇದು ಸಿಗುವುದಿಲ್ಲ. ಕಾಶ್ಮೀರದ ಸ್ಥಿತಿ ಅಪಘಾನಿಸ್ತಾನ, ಪಾಕಿಸ್ತಾನದ ರೀತಿಯಲ್ಲಿ ಆಗಬಾರದು ಇದು ನಮ್ಮನ್ನು ಇನ್ನಷ್ಟು ನರಕಕ್ಕೆ ದೂಡುತ್ತದೆ. ಮೊದಲು ನಮಗೆ ಶಾಂತಿ ಬೇಕು."**


ನಮ್ಮನ್ನು ಶ್ರೀನಗರದ ವಿಮಾನ ನಿಲ್ದಾಣದಿಂದ ಹೋಟೆಲ್ ವರೆಗೆ ಕರೆದುಕೊಂಡು ಬಂದ ಚಾಲಕ ಶೌಕತ್ ಪ್ರಧಾನಿ ಹಾಗೂ ಸೋನಿಯಾ ಗಾಂಧೀ ಹೆಸರಿಗೆ ಹಿಡಿ ಶಾಪ ಹಾಕುತ್ತಿದ್ದ. ಕಾಶ್ಮೀರದಲ್ಲಿ ಸೇನೆ ಕಾರ್ಯಾಚರಣೆಗೆ ನೀಡಿದ ವಿಶೇಷ ಕಾನೂನನ್ನು ಹಿಂದೆ ತೆಗೆದುಕೊಳ್ಳುವವರೆಗೆ ಕಾಶ್ಮೀರದ ಜನತೆ ದೆಹಲಿಯನ್ನು ನಂಬುವುದಿಲ್ಲ. ಒಂದು ಕಡೆ 15 ರಿಂದ 20 ವರ್ಷದ ಯುವಕರ ಮೇಲೆ ದಿನವೂ ಗುಂಡು ಹಾರಿಸಿ ನಂತರ ಇಂಥ ಪ್ಯಾಕೇಜ್‌ಗಳನ್ನು ನೀಡಿದರೆ ಏನು ಅರ್ಥ? ನಿಮ್ಮ ದೆಹಲಿ ನಮ್ಮ ಯುವಕರನ್ನು ಇರುವೆಗಳಂತೆ ಹೊಸಕಿ ಹಾಕುತ್ತದೆ"ಎಂದು ಹೇಳುತ್ತಾ ಸುಮಾರು 20 ಕಿಲೋ ಮೀಟರ್ ಸುತ್ತು ಹಾಕಿ ನಮ್ಮನ್ನು ಹೇಗೋ ಹೋಟೆಲ್‌ಗೆ ತಂದು ಬಿಟ್ಟ. ಇವತ್ತು ಎಲ್ಲಿಯೂ ಹೊರಗೆ ಹೋಗಬೇಡಿ ನಾಳೆ ಪ್ರಧಾನಿ ಶ್ರೀನಗರದಿಂದ ದೆಹಲಿಗೆ ಹಾರಿದ ಮೇಲೆ ಎಲ್ಲವೂ ನಾರ್ಮಲ್ ಆಗುತ್ತದೆ. ಹೋಟೆಲ್ ರೂಂನಲ್ಲೆ ಇರಿ. ಕೆಹೆವಾ ಚಾಯ್ ಕುಡಿಯಲು ಮರೆಯಬೇಡಿ ಎಂದು ಹೇಳಿ ಹೊರಟು ಹೋದ.

ಕೆಹೆವಾ ಚಾಯ್ ಕಾಶ್ಮೀರದ ಜನಪ್ರಿಯ ಚಹಾ. ಗ್ರೀನ್‌ಟೀ ಗೆ ದಾಲ್‌ಚೀನಿ, ಇಲೈಚಿ (ಏಲಕ್ಕಿ) ಸೇರಿಸಿ ನಂತರ ಕಾಶ್ಮಿರದಲ್ಲೇ ಬೆಳೆಯಲಾಗುವ ಕೇಸರ್ ಸೇರಿಸಿದರೆ ತಯಾರಾಗುವ ಚಹಾ ಕಾಶ್ಮೀರದ ಪ್ರಸಿದ್ಧ ಕೆಹೆವಾ ಚಾಯ್. ಹೆಚ್ಚು ಚಳಿ ಇರುವ ಕಾಶ್ಮೀರ ಕಣಿವೆಯಲ್ಲಿ ಬೆಚ್ಚಗಿನ ಕಲರ್ ಫುಲ್ ಫರನ್ ಬಟ್ಟೆ ಧರಿಸಿ ಕಾಂಗಡಿ ಎಂಬ ಇದ್ದಿಲು ಹಾಕಿ ಕಾಯಿಸಿಕೊಳ್ಳುವ ಕಟ್ಟಿಗೆಯ ಬುಟ್ಟಿ ಕೈಯಲ್ಲಿ ಹಿಡಿದು ಕೆಹೆವಾ ಚಾಯ್ ಕುಡಿಯುತ್ತ ಆಕಾಶದ ಕಡೆ ನೋಡುತ್ತಾ ಕೂರುವುದೇ ಕಾಶ್ಮೀರಿಗರ ಇಷ್ಟದ ಟೈಮ್‌ಪಾಸು.

ಹಾಗೆ ತುಲನಾತ್ಮಕವಾಗಿ ನೋಡಿದರೆ 90 ದಶಕದಲ್ಲಿ ಉಗ್ರರ ಚಟುವಟಿಕೆಗಳಿಂದ ನಲುಗಿದ ಕಾಶ್ಮೀರ ಈಗ ಹೆಚ್ಚು ಶಾಂತವಾಗಿದೆ. ದಿನಕ್ಕೊಂದರಂತೆ ನಡೆಯುತ್ತಿದ್ದ ಉಗ್ರರ ಅಟ್ಟಹಾಸಗಳ ಸಂಖ್ಯೆ ಕಡಿಮೆಯಾಗಿದೆ. ವಿಶ್ವದ ಪ್ರಸಿದ್ಧ ಪ್ರವಾಸಿ ತಾಣ ಮತ್ತೆ ಯಾತ್ರಿಗಳಿಂದ ತುಂಬಿ ತುಳುಕುತ್ತಿದೆ. ಕಳೆದ ವರ್ಷ ಸುಮಾರು 15 ಲಕ್ಷ ಪ್ರವಾಸಿಗರು ಶ್ರೀನಗರಕ್ಕೆ ಬಂದು ಹೋಗಿದ್ದಾರೆ. 198 9 ರಲ್ಲಿ ಜೆಕೆಎಲ್‌ಎಫ್ ಉಗ್ರರು ಕಾಶ್ಮೀರದ ಪೋಲಿಸ್ ಮಹಾನಿರ್ದೇಶಕನನ್ನು ಹತ್ಯೆಗೈದ ನಂತರ ಸುಮಾರು 18 ವರ್ಷ ಹತೋಟಿ ಮೀರಿ ನಡೆದ ಘಟನೆಗಳು ಈಗ ನಿಧಾನವಾಗಿ ಇಳಿಕೆಯಾಗುತ್ತಿವೆ. ಭಯೋತ್ಪಾದನೆ ಮತ್ತು ಪ್ರವಾಸೋದ್ಯಮ ಎರಡು ಕೂಡ ನೇರವಾಗಿ ಸಂಬಂಧ ಪಡುವುದರಿಂದ ಸ್ಥಳೀಯ ಜನತೆ ಪ್ರವಾಸೋದ್ಯಮವನ್ನು ಆಯ್ದುಕೊಳ್ಳುತ್ತಿದ್ದಾರೆ. ಇದು ಅಲ್ಲಿನ ಜನರಿಗೆ ದೆಹಲಿಯ ಮೇಲೆ ಪ್ರೀತಿ ಉಂಟಾಗಿದೆ ಎಂದು ಅರ್ಥವಲ್ಲ; ಆದರೆ ಭಾರತ ಎಷ್ಟು ಅನಿವಾರ್ಯ ಎಂಬುದು ಆರ್ಥಿಕ ಕಾರಣಗಳಿಂದ ನಿಧಾನವಾಗಿ ಅರ್ಥವಾಗುತ್ತಿದೆ.

ದಲ್ ಲೇಕ್‌ನಲ್ಲಿ ಸಂಜೆ ಶಾಲ್ ಗಳನ್ನೂ ಮಾರುವ ಆದಿಲ್ ಖಾನ್ "ಸುಮಾರು 24 ವರ್ಷಗಳ ನಿರಂತರ ಭದ್ರತಾ ಪಡೆಗಳ ಜೊತೆಗಿನ ಕಾದಾಟದ ನಂತರ ನಾವು ದಣಿದಿದ್ದೇವೆ. ಸುಮಾರು 2 ಲಕ್ಷ ಯುವಕರನ್ನು ಕಾಶ್ಮೀರ ಕಳೆದುಕೊಂಡಿದೆ. ಇದೊಂದು ವಿಷ ಚಕ್ರ. ಮೊದಲು ನಾವು ಶಸ್ತ್ರ ಹಿಡಿದೆವು, ಪರಿಣಾಮ ಬಂದಿದ್ದು ವಿಶಾಲ ಭಾರತೀಯ ಸೇನೆ. ನಮ್ಮವರು ಒಂದು ದಾಳಿ ನಡೆಸಿದರೆ ನಂತರ ಸೇನೆಯವರು ಹತ್ತು ಪ್ರತಿ ದಾಳಿ ನಡೆಸುತ್ತಾರೆ. ನಮ್ಮ ಕುಟುಂಬ, ಮಹಿಳೆಯರು ಮತ್ತು ಮಕ್ಕಳು ಇದರ ಪರಿಣಾಮ ಎದುರಿಸಬೇಕಾಗುತ್ತದೆ. ಇನ್ನು ಹೀಗೆಯೇ ದಾಳಿ ಪ್ರತಿದಾಳಿಯ ಚಕ್ರದಲ್ಲಿ ಸಿಲುಕಿದರೆ ತಿನ್ನುವುದು ಏನು? ಹಿಂಸಾಚಾರದ ಘಟನೆಗಳು ನಡೆಯುತ್ತಲೇ ಇದ್ದರೆ ವಿದೇಶಿ ಪ್ರವಾಸಿಗರು ಹೋಗಲಿ ನಿಮ್ಮ ದೆಹಲಿಯವರೇ ಇಲ್ಲಿ ಬರುವುದಿಲ್ಲ. ನಮ್ಮ ಉತ್ಪನ್ನದ ಮೂಲವೇ ಪ್ರವಾಸೋದ್ಯಮ, ಹೀಗಾಗಿ ಸ್ಥಳಿಯರು ಈಗ ಉಗ್ರರಿಗೆ ಸಹಕಾರ ನೀಡುವುದಿಲ್ಲ. ಬೆಂಬಲ ಇಲ್ಲ ಎಂದು ಇದರ ಅರ್ಥ ಅಲ್ಲ ಆದರೆ ಸಹಕಾರ ನೀಡುವ ಸ್ಥಿತಿಯಲ್ಲಿ ನಾವಿಲ್ಲ"ಎಂದು ಬಡಬಡಾಯಿಸುತ್ತಿದ್ದ.

ಕಾಶ್ಮೀರದ ಯಾವುದೇ ಯುವಕರನ್ನು ಸ್ವಲ್ಪ ವಿಶ್ವಾಸದಿಂದ ಮಾತನಾಡಿಸಿದರೆ ಸಾಕು. ಗತಿಸಿದ ದಿನಗಳ ಕಥೆಯನ್ನೇ ಕಣ್ಣ ಮುಂದೆ ತೆರೆದಿಡುತ್ತಾರೆ.





ವಿಪಿ ಸಿಂಗ್ ಸರ್ಕಾರದಲ್ಲಿ ಆಗ ತಾನೇ ಗೃಹ ಮಂತ್ರಿಯಾಗಿದ್ದ ಮುಫ್ತಿ ಮೊಹಮ್ಮದ್ ಸಯಿದ್ ಪುತ್ರಿಯನ್ನು ಕೆಲ ಯುವಕರು ಮೆಡಿಕಲ್ ಕಾಲೇಜ್ ಬಸ್‌ನಿಂದ ಅಪಹರಿಸಿ ಬಂದೂಕಿನ ಮೊನೆಯ ಮೇಲೆ ಕೇಂದ್ರ ಸರ್ಕಾರವನ್ನು ತನ್ನ ಬೇಡಿಕೆಗಳಿಗೆ ಮಣಿಸುವಂತೆ ಮಾಡಿದ ಸಂಜೆ ಶ್ರೀನಗರದ ಓಲ್ಡ್ ಸಿಟಿ ಯಿಂದ ಹೊರಟ ಮೆರವಣಿಗೆ ನೋಡಿದರೆ ಮುಂಜಾನೆಯ ಸೂರ್ಯ ಉದಯಿಸುವಾಗ ನಾವು ಭಾರತದಿಂದ ಬೇರೆಯಾಗುತ್ತೇವೆ ಎಂದು ಎನಿಸಿತ್ತಂತೆ.

ಒಂದು ಕಡೆ ಬಡತನ, ನಿರುದ್ಯೋಗ ಇನ್ನೊಂದು ಕಡೆ ಪ್ರತ್ಯೇಕತೆಯ ಭ್ರಮೆ. ಒಂದು ಕಡೆ ಪಾಕಿಸ್ತಾನದ ಹಣದ ಆಮಿಷ. ಇನ್ನೊಂದು ಕಡೆ ಜಿಹಾದ್‌ನ ಭ್ರಮೆ. ಹೀಗೆ ಅನೇಕ ಕಾರಣಗಳಿಂದ ಬಂದೂಕು ಹಿಡಿದಿದ್ದ ಕಾಶ್ಮೀರದ ಸುಮಾರು ಒಂದೂವರೆ ಲಕ್ಷ ಯುವಕರು ಹತರಾಗಿದ್ದಾರೆ. "ಜಿಸ್ ಕೊ ಹೈ ಖುದಾ ಸೆ ಖೌಫ್ ಉಠಾಲೊ ಕಲಾಶ್ನಿಕೋವ್"ಅಂದರೆ ಅಲ್ಲಾನಿಗೆ ಹೆದರುವ ಯುವಕರೇ ಕಲಾಶ್ನಿಕೋವ್ ಎತ್ತಿಕೊಳ್ಳಿ ಎಂದು ಶ್ರೀನಗರದಲ್ಲಿ ಘೋಷಣೆ ಕೂಗುತ್ತಿದ್ದ ಬಹುತೇಕ ಯುವಕರು ಈಗ ಭಯೋತ್ಪಾದನೆಯ ಬಗ್ಗೆ ಭ್ರಮ ನಿರಸನಗೊಂಡವರಂತೆ ಮಾತನಾಡುತ್ತಾರೆ.

ನಾವು ಇಳಿದುಕೊಂಡಿದ್ದ ಹೋಟೆಲ್‌ನಲ್ಲಿ ಕೆಲಸ ಮಾಡುವ ಯುವಕನೊಬ್ಬ ಹೇಳಿದ ಪ್ರಕಾರ "ಭಾರತದಿಂದ ಸ್ವಾತಂತ್ರ್ಯ ನಮ್ಮ ಕನಸು. ಆದರೆ ಬಂದೂಕಿನಿಂದ ಇದು ಸಿಗುವುದಿಲ್ಲ. ಕಾಶ್ಮೀರದ ಸ್ಥಿತಿ ಅಫಘಾನಿಸ್ತಾನ, ಪಾಕಿಸ್ತಾನದ ರೀತಿಯಲ್ಲಿ ಆಗಬಾರದು ಇದು ನಮ್ಮನ್ನು ಇನ್ನಷ್ಟು ನರಕಕ್ಕೆ ದೂಡುತ್ತದೆ. ಮೊದಲು ನಮಗೆ ಶಾಂತಿ ಬೇಕು. ಹತ್ತು ವರ್ಷಗಳ ಹಿಂದೆ ನಾವೆಲ್ಲರೂ ಕೂಡ ಬಂದೂಕು ನೋಡಿದವರೇ. ಆದರೆ ಅದರಿಂದ ಏನು ಸಾಧ್ಯವಾಗುವುದಿಲ್ಲ. ಕಾಶ್ಮೀರ ಬಂದೂಕು ಬಾಂಬ್ ಗಳಿಂದ ಹೆಸರಾಗುವುದು ಬೇಡ. ನಾವು ಪಶ್ಮಿನಾ, ಶಹತೂಶ್ ಶಾಲ್‌ಗಳಿಗಾಗಿ ವಿಶ್ವದಲ್ಲೆಡೆ ಹೆಸರು ಪಡೆದಿದ್ದೇವೆ. ಅದನ್ನೇ ಮುಂದುವರೆಸಿಕೊಂಡು ಹೋಗೋಣ ಎಂದು ನಮಗೆ ಅರಿವಾಗತೊಡಗಿದೆ"ಎಂದು ಹೇಳುತ್ತಿದ್ದ. ಈ ಯುವಕನ ಮೂರು ಬಾಲ್ಯ ಮಿತ್ರರು ಬಂದೂಕು ಹಿಡಿದು ಭದ್ರತಾ ಪಡೆಗಳ ಎನ್ ಕೌಂಟರ್‌ನಲ್ಲಿ ಅಸು ನೀಗಿದ್ದಾರೆ.

ಕಾಶ್ಮೀರದ ಪಶ್ಮಿನಾ ಶಾಲ್ ವಿಶ್ವ ಪ್ರಸಿದ್ಧ. ಅಮೆರಿಕಾದ ಬಿಲ್ ಕ್ಲಿಂಟನ್‌ನಿಂದ ಹಿಡಿದು ಅಟಲ್ ಬಿಹಾರಿ ವಾಜಪೇಯಿ ವರೆಗೆ ಎಲ್ಲರೂ ಪಶ್ಮಿನಾದ ಫ್ಯಾನ್‌ಗಳೇ. ಹಿಮಾಲಯದ ಎತ್ತರದಲ್ಲಿ ಇರುವ ಮೇಕೆಗಳ ಉಣ್ಣೆಯಿಂದ ತಯಾರಾಗುವ ಶಾಲ್ ಗಳು 15 ಸಾವಿರ ರೂಪಾಯಿ ಬೆಲೆ ಬಾಳುತ್ತವೆ. ಶಹತೂಶ್ ಎನ್ನುವ ಶಾಲ್ ತಯಾರಿಕೆಯನ್ನು ಪ್ರಾಣಿ ಹತ್ಯೆಯ ಕಾರಣದಿಂದ ಸರ್ಕಾರ ನಿಷೇಧಿಸಿದೆಯಾದರು ಈ ಶಾಲ್‌ಗಳು ಇನ್ನು ಕೂಡ ಇಲ್ಲಿ ಸಿಗುತ್ತವೆ. ಉಗ್ರರ ಅತಿರೇಕದ ದಿನಗಳಲ್ಲಿ ಕೂಡ ಕಾಶ್ಮೀರದ ಆರ್ಥಿಕತೆಯನ್ನು ಕಾಪಾಡಿದ್ದು ಇದೇ ಶಾಲ್‌ಗಳ ವ್ಯಾಪಾರ.

ಸದ್ಯದ ಪರಿಸ್ಥಿತಿಯಲ್ಲಿ ಕಾಶ್ಮೀರದಲ್ಲಿ ಮುಖ್ಯಮಂತ್ರಿ ಉಮರ್ ಅಬ್ದುಲ್ಲರ ಕುರಿತು ಸ್ಥಳೀಯ ಜನರಲ್ಲಿ ಒಳ್ಳೆಯ ಹೆಸರಿದೆ. ತಂದೆ ಫಾರೂಕ್ ಅಬ್ದುಲ್ಲರಂತೆ ವಿಲಾಸಿಯಲ್ಲದ ತುಂಬಾ ದೂರ ದೃಷ್ಟಿಕೋನದಿಂದ ಉಮರ್ ಮಾಡುತ್ತಿರುವ ಅಭಿವೃದ್ಧಿ ಕೆಲಸಗಳು ಸಾಮಾನ್ಯ ಜನರಲ್ಲಿ ಜನಪ್ರಿಯತೆ ಗಳಿಸಿವೆ. ಆದರೆ ಒಂದು ಕಾಲದಲ್ಲಿ ಶ್ರೀನಗರದಲ್ಲಿ ಹರತಾಳದ ಹುಕುಮತ್ ನಡೆಸುತ್ತಿದ್ದ ಹುರಿಯತ್ ನಾಯಕರ ಬಗ್ಗೆ ಜನರಿಗೆ ಒಳ್ಳೆಯ ಅಭಿಪ್ರಾಯ ಇದ್ದಂತೆ ಕಾಣುವುದಿಲ್ಲ. ಓಲ್ಡ್‌ಸಿಟಿಯಲ್ಲಿ ಹುರಿಯತ್ ಪ್ರಾಬಲ್ಯವಿದೆಯಾದರೂ ಬಹುತೇಕ ಜನ ಈ ನಾಯಕರು ತಮ್ಮ ಮಕ್ಕಳನ್ನು ಅಮೇರಿಕಾದಲ್ಲಿ ಓದಿಸಿ ಇಲ್ಲಿನ ಯುವಕರನ್ನು ಸೇನೆಯ ಮೇಲೆ ಕಲ್ಲು ಹೊಡೆಯುವ ಕೆಲಸಕ್ಕೆ ಹಚ್ಚುವುದರ ಬಗ್ಗೆ ಕಿಡಿ ಕಾರುತ್ತಾರೆ.



**"ಲೆಬನಾನ್ ನಲ್ಲಿ ಹೋರಾಟ ನಡೆಸುವ ನಾಯಕರು ಮೊದಲು ತಮ್ಮ ಮಕ್ಕಳಿಂದಲೇ ಹೋರಾಟ ಆರಂಭಿಸುತ್ತಾರೆ. ಆದರೆ ಈ ಹುರಿಯತ್ ನಾಯಕರು ನಮ್ಮ ಮಕ್ಕಳನ್ನು ಸಾಯಲು ಮುಂದೆ ಮಾಡಿ ತಮ್ಮ ಕುಟುಂಬವನ್ನು ವಿದೇಶದಲ್ಲಿ ಓದಿಸುತ್ತಾರೆ."**

ಅರಿಫ್ ಅಹ್ಮದ್ ಎಂಬ ಪುಸ್ತಕದ ಅಂಗಡಿ ನಡೆಸುವ ವಯಸ್ಕ ಹೇಳುತ್ತಿದ್ದ ಪ್ರಕಾರ "ಲೆಬನಾನ್ ನಲ್ಲಿ ಹೋರಾಟ ನಡೆಸುವ ನಾಯಕರು ಮೊದಲು ತಮ್ಮ ಮಕ್ಕಳಿಂದಲೇ ಹೋರಾಟ ಆರಂಭಿಸುತ್ತಾರೆ. ಆದರೆ ಈ ಹುರಿಯತ್ ನಾಯಕರು ನಮ್ಮ ಮಕ್ಕಳನ್ನು ಸಾಯಲು ಮುಂದೆ ಮಾಡಿ ತಮ್ಮ ಕುಟುಂಬವನ್ನು ವಿದೇಶದಲ್ಲಿ ಓದಿಸುತ್ತಾರೆ." ಇದೆಂಥ ಹೋರಾಟದ ಲಕ್ಷಣ ಎಂದು ಆತ ಕೇಳುತ್ತಿದ್ದ.

ತೊಂಭತ್ತರ ದಶಕದ ಮೊದಲು ಕಾಶ್ಮೀರದಲ್ಲಿ 13 ಚಿತ್ರ ಮಂದಿರಗಳಿದ್ದವು. ಆದರೆ ಈಗ ಒಂದೂ ನಡೆಯುವುದಿಲ್ಲ. ಉಗ್ರರು ಚಿತ್ರ ವೀಕ್ಷಣೆ ಇಸ್ಲಾಂಗೆ ವಿರುದ್ಧ ಎಂದು ಘೋಷಿಸಿದ ನಂತರ ಇವು ಬಾಗಿಲು ತೆರೆದಿಲ್ಲ. ಗೋಡೆಗಳ ತುಂಬೆಲ್ಲ ಚಿತ್ರಗಳ ಪೋಸ್ಟರ್‌ಗಳು ಅಂಟಿಸುವ ನಗರಗಳಿಗಿಂತ ಶ್ರೀನಗರ ಭಿನ್ನ.

ಇನ್ನು ಜೀನ್ಸ್ ಧಾರಿಗಳೇ ತುಂಬಿಕೊಂಡಿರುವ ಕಾಲದಲ್ಲಿ ಕಾಶ್ಮೀರದಲ್ಲಿ ಜೀನ್ಸ್ ಕಾಣ ಸಿಗುವುದಿಲ್ಲ. ಎಲ್ಲ ಮಹಿಳೆಯರು ಬುರ್ಖಾ ಹಾಕಿಕೊಳ್ಳುವುದಿಲ್ಲವಾದರೂ ತಲೆಗೆ ಸ್ಕಾರ್ಫ್ ಹಾಕಿ ಓಡಾಡುವುದು ಕಡ್ಡಾಯ. ಇನ್ನು ಕಾಶ್ಮೀರಿ ಯುವತಿಯರ ಸ್ನಿಗ್ಧ ಅಪರೂಪದ ಸೌಂದರ್ಯ ಅಲ್ಲಿನ ಪ್ರಕೃತಿಯಷ್ಟೇ ಚೆಲುವು. ಉಗ್ರರ ಪರಕಾಷ್ಠೆಯ ಕಾಲದಲ್ಲಿ ಕಾಶ್ಮೀರ ಕಣಿವೆಯಲ್ಲಿ ಇಸ್ಲಾಂ ಕಾನೂನಿನ ಅಡಿಯಲ್ಲಿ ಮದ್ಯದ ಅಂಗಡಿಗಳು ಮುಚ್ಚಿದ್ದವು. ಈಗಲೂ ಕೂಡ ಒಂದೆರಡು ಅಂಗಡಿಗಳು ಇರಬಹುದು ಅಷ್ಟೇ. ಇಲ್ಲಿನ ಯುವಕರು ಮದ್ಯ ಕುಡಿಯುವುದು ಕಡಿಮೆ. ಆದರೆ ಚಳಿ ಎಂಬ ಕಾರಣದಿಂದ ಇಲ್ಲಿನ ಯುವಕರು ಅತಿಯಾಗಿ ಸಿಗರೇಟ್ ಸೇದುತ್ತಾರೆ.

ಹದಿನೈದು ವರ್ಷಗಳ ಹಿಂದೆ ಶ್ರೀನಗರದಲ್ಲಿ ಕಾಫೀ ಕುಡಿಯುವುದೆಂದರೆ ಭಾರತದ ಜೊತೆ ಗುರುತಿಸಿಕೊಂಡಂತೆ ಎಂದು ಹೇಳುತ್ತಿದ್ದರಂತೆ. ಆದರೆ ಈಗ ಲಾಲ್ ಚೌಕ್ ಹತ್ತಿರವೇ ಕೆಫೆ ಅರೇಬಿಯಾ ಹಾಗೂ ಕೆಫೆ ಕಾಫೀ ಡೇ ತೆರೆದುಕೊಂಡಿವೆ. ಜೋಡಿಗಳು ಓಡಾಡುವುದೇ ಸಾರ್ವಜನಿಕವಾಗಿ ಕಾಣಿಸಿಕೊಳ್ಳುವುದೇ ನಿಷಿದ್ಧ ಎಂಬ ದಿನಗಳು ದೂರವಾಗಿ ಕಾಫೀ ಶಾಪ್ ಗಳು ಹಾಗು ಬ್ಯಾಕ್‌ಗ್ರೌಂಡ್‌ನಲ್ಲಿ ಪಾಶ್ಚಿಮಾತ್ಯ ಸಂಗೀತದ ಗುಂಗಿನಲ್ಲಿ ಇಲ್ಲಿನ ಯುವಕ ಯುವತಿಯರು ನಿಧಾನವಾಗಿ ಕಾಣಿಸಿಕೊಳ್ಳತೊಡಗಿದ್ದಾರೆ.

ಇವೆಲ್ಲವೂ ಹೊಸ ಶ್ರೀನಗರದ ಕಥೆಯಾದರೆ, ಓಲ್ಡ್ ಶ್ರೀ ನಗರ ಮಾತ್ರ ಇನ್ನುವರೆಗೂ ಕೂಡ ಪ್ರತ್ಯೇಕತೆಯ ಕೇಂದ್ರ ಸ್ಥಾನ. ನೀವು ಒಂದು ಸಲ ಒಳ ಪ್ರವೇಶಿಸಿದರೆ "ಗೋ ಇಂಡಿಯಾ ಗೋ"ಎಂಬ ಗೋಡೆ ಬರಹಗಳು ಉರ್ದುವಿನಲ್ಲಿ ಬರೆದ ಭಾರತ ವಿರೋಧಿ ಪೋಸ್ಟರ್ ಗಳು ಕಾಣ ಸಿಗುತ್ತವೆ. ಇಲ್ಲಿ ಮಾತ್ರ ಗಲ್ಲಿಗಲ್ಲಿಗಳಲ್ಲಿ ಸೇನೆಯ ಯೋಧರು ಕಾಣ ಸಿಗುತ್ತಾರೆ.




ಕಳೆದ ಐದು ತಿಂಗಳಲ್ಲಿ ಓಲ್ಡ್ ಸಿಟಿ ಹತ್ತಿರದ ಬೆಮಿನಾ ಬಟಮಲೂ ಪ್ರದೇಶಗಳಲ್ಲಿ ಸೇನೆ ಮತ್ತು



ಅರೆ ಸೇನಾ ಪಡೆಯ ಮೇಲೆ 10 ದಾಳಿಗಳು ನಡೆದಿವೆ. ಪ್ರಧಾನಿ ಭೇಟಿಯ ಹಿಂದಿನ ದಿನ ನಡೆದ ದಾಳಿಯು ಕೂಡ ನಡೆದಿದ್ದು ಓಲ್ಡ್‌ಸಿಟಿಗೆ ಹತ್ತಿಕೊಂಡೆ ಇರುವ ಹಯ್ದರ್ಪೋರಾ ಬಾರಾಮುಲ್ಲಾಗೆ ಹೋಗುವ ರಸ್ತೆಯಲ್ಲಿ. ಆಶ್ಚರ್ಯವೆಂದರೆ ದಾಳಿ ನಡೆಸಿದ ನಂತರ ಬೈಕ್ ನಲ್ಲಿ ಪರಾರಿಯಾದ ಉಗ್ರರು ಸಿಕ್ಕಿಲ್ಲ.

ನಮ್ಮನ್ನು ಅಲ್ಲಿಗೆ ಕರೆದುಕೊಂಡು ಹೋದ ಆಟೋ ಚಾಲಕ ಶಾಹಿದ್ ಹೇಳುವ ಪ್ರಕಾರ “ಭದ್ರತಾ ಪಡೆಗಳ ಮೇಲೆ ದಾಳಿ ನಡೆಸುವ ಮುಜಾಹಿದೀನ್ ಗಳನ್ನೂ ಓಲ್ಡ್ ಸಿಟಿಯ ಜನ ಅಳಿಯನನ್ನು ನೋಡಿಕೊಳ್ಳುವಂತೆ ಸತ್ಕರಿಸುತ್ತಾರೆ. ಶ್ರೀನಗರ ದಲ್ಲಿ ಆಗಾಗ “ಅಜಾದಿ”ಎಂದು ಹೇಳುತ್ತಾ ಸೇನೆಯ ಮೇಲೆ ಕಲ್ಲು ಹೊಡೆದು ನಂತರ ಸೇನೆಯ ಜವಾನರು ಪ್ರತಿ ದಾಳಿ ನಡೆಸಿದಾಗ ಮಾನವ ಹಕ್ಕು ಎಂದು ಬೊಬ್ಬೆ ಹೊಡೆಯುವವರು ಇಲ್ಲಿನ ಭ್ರಮಿತ ಯುವಕರು”. ಆದರೆ ಓಲ್ಡ್‌ಸಿಟಿಯಲ್ಲೇ ವಾಸಿಸುವ ಚಹಾ ಅಂಗಡಿ ನಡೆಸುವ ಇರ್ಫಾನ್ ಭಟ್ಟ್ “ದೆಹಲಿಯಲ್ಲಿ ಅತ್ಯಾಚಾರದ ಘಟನೆ ಖಂಡಿಸಿ ಯುವಕ ಯುವತಿಯರು ಬೀದಿಗೆ ಇಳಿದು ಕಲ್ಲುಗಳಿಂದ ಅಟ್ಯಾಕ್ ಮಾಡಿದಾಗ ಬರೀ ನೀರು ಹೊಡೆಯುವ ನಿಮ್ಮ ಸರ್ಕಾರ ನಮ್ಮ ಯುವಕರು ಬೀದಿಗೆ ಇಳಿದ ತಕ್ಷಣ ಬಂದೂಕು ದಾಳಿ ನಡೆಸುವುದು ಏಕೆ?” ಎಂದು ಪ್ರಶ್ನಿಸುತ್ತಾರೆ.

ಇದೇ ಓಲ್ಡ್‌ಸಿಟಿಯಲ್ಲಿ ಕಾಶ್ಮೀರಿ ಪಂಡಿತರ ಮೂರು ಗಲ್ಲಿಗಳಿದ್ದವು. ಆದರೆ ಈಗ ಓಲ್ಡ್‌ಸಿಟಿ ಯಲ್ಲಿ ಯಾವೊಬ್ಬ ಹಿಂದೂವೂ ಇಲ್ಲ. ಹಿಂದೂಗಳ ಸಣ್ಣ ಸಣ್ಣ ಮಂದಿರಗಳು ಕೂಡ ಇಲ್ಲ. ಇಲ್ಲಿ ಈಗ ಏನಿದ್ದರು ಇಸ್ಲಾಂ ರಾಜ್ಯ. ಒಂದು ಕಾಲದಲ್ಲಿ ಸನಾತನ ಹಿಂದೂ ಸಂಸ್ಕೃತಿಗೆ ಜನ್ಮ ನೀಡಿದ, ಪೋಷಿಸಿದ ಸಿಂಧೂ ತಟದಲ್ಲಿ ಈಗ ಹಿಂದೂಗಳೇ ಇಲ್ಲ ಎನ್ನುವುದು ವಿಪರ್ಯಾಸ.

ಕಾಶ್ಮೀರದಲ್ಲಿ ಆರಂಭವಾದ ಪಾಕ್ ಪ್ರಾಯೋಜಿತ ಉಗ್ರವಾದಕ್ಕೆ ಬಲಿಯಾಗಿ ತಮ್ಮ ಜನ್ಮ ಕರ್ಮ ಭೂಮಿಯಿಂದ ದೂರ ಬಂದು ತಮ್ಮದೇ ದೇಶದಲ್ಲಿ ನಿರಾಶ್ರಿತರಾಗಿ ಬದುಕುತ್ತಿರುವವರು ಕಾಶ್ಮೀರಿ ಪಂಡಿತರು. ಶ್ರೀನಗರದಿಂದ ಗಂಡೇರ್‌ಬಾಲಗೆ ಹೋಗುವ ದಾರಿಯಲ್ಲಿರುವ ಪಂಡಿತರ ಆರಾಧ್ಯದೈವತೆ ಖೀರ್ ಭವಾನಿ ಮಂದಿರಕ್ಕೆ ಹೋದರೆ ನಿಜಕ್ಕೂ ಪಂಡಿತರ ಪರಿಸ್ಥಿತಿ ಅರ್ಥವಾಗುತ್ತದೆ. ಮಂದಿರದ ಸುತ್ತಲೂ ಮುಸ್ಲಿಂ ಕುಟುಂಬಗಳು. ಅಲ್ಲಿ ಪೂಜೆ ನಡೆಸುವ ಹಿಂದೂ ಅರ್ಚಕರ ಕುಟುಂಬಗಳು ಮಂದಿರದ ಪ್ರಾಂಗಣದ ಒಳಗೆ ಬಿಎಸ್‌ಎಫ್ ಭದ್ರತೆಯಲ್ಲಿ ಬದುಕುವ ಅನಿವಾರ್ಯತೆ. ಇಲ್ಲಿನ ಸ್ಥಳೀಯ ವಯಸ್ಕ ಮುಸ್ಲಿಮರೇನೋ ಪಂಡಿತರು ಮತ್ತೆ ಕಣಿವೆಗೆ ಬಂದು ನೆಲೆಸಲಿ ಎಂದು ಹೇಳುತ್ತಾರೆ. ಆದರೆ ತಮ್ಮ ಜೀವಿತಾವಧಿಯಲ್ಲಿ  ಉಗ್ರರು ನಡೆಸಿದ ಅಟ್ಟಹಾಸವನ್ನು ಕಣ್ಣ ಮುಂದೆ ನೋಡಿರುವ ಪಂಡಿತರು ವರ್ಷಕ್ಕೊಮ್ಮೆ ಭವಾನಿ ದರ್ಶನಕ್ಕೆ ಬರುತ್ತಾರೆ. ಆದರೆ ವಾಪಾಸ್ ಬಂದು ನೆಲೆಸಲು ತಯಾರಿಲ್ಲ.

ನಾವು ಜಮ್ಮುಗೆ ಹೋದಾಗ ಸಿಕ್ಕಿದ್ದ ಕಾಶ್ಮೀರಿ ಪಂಡಿತರಾಗಿರುವ ಸುಪ್ರಿಂ ಕೋರ್ಟ್ ಹಿರಿಯ ವಕೀಲರೊಬ್ಬರು “ನಮಗೆ ಕಾಶ್ಮೀರದ ಬಗ್ಗೆ ಸಹಜ ಸೆಳೆತವಿದೆ.  ಆದರೆ ಅಲ್ಲಿ ಹೋಗಿ ನೆಲೆಸಲು ಈಗ ಸಾಧ್ಯವಿಲ್ಲ. ನಮ್ಮ ಮಕ್ಕಳಿಗಂತೂ ಕಾಶ್ಮೀರ ಬೇಡವೇ ಎನಿಸಿಬಿಟ್ಟಿದೆ. ನಮ್ಮ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕಷ್ಟಪಟ್ಟು ಕೊಟ್ಟಿದ್ದೇವೆ. ಮತ್ತೆ ಅಲ್ಲಿ ಹೋಗಿ ನರಕದಲ್ಲಿ ಬದುಕುವುದು ಏಕೆ ? ಈಗ ಕಾಶ್ಮೀರಿ ಮುಸ್ಲಿಮರು ವಾಪಾಸ್ ಬನ್ನಿ ಎನ್ನುತ್ತಾರೆ ಆದರೆ 24 ವರ್ಷಗಳ ಹಿಂದೆ ನಮ್ಮ ಮನೆಗಳನ್ನು ಉಗ್ರರು ಸುಡುತ್ತಿದ್ದಾಗ ಇವರು ಯಾರು ಕೂಡ ನಮ್ಮ ನೆರವಿದೆ ಬಂದಿಲ್ಲ ಎನ್ನುವುದನ್ನು ನಾವು ಮರೆಯುವುದು ಹೇಗೆ? ಹಾಗೂ ಆಗ ನಮ್ಮ ಮನೆಗಳನ್ನು ಅಲ್ಲಿನ ಮುಸ್ಲಿಮರು ಜಬರದಸ್ತಿ ಮಾಡಿ ಕಡಿಮೆ ಬೆಲೆಯಲ್ಲಿ ಕೊಂಡುಕೊಂಡಿದ್ದಾರೆ ಈಗ ನಮಗೆ ಅಲ್ಲಿ ಏನಿದೆ?” ಎಂದು ಖಾರವಾಗಿ ಆದರೆ ದುಃಖ ಭರಿತರಾಗಿ ಕೇಳುತ್ತಾರೆ. ತುಲಮೂಲನಲ್ಲಿ ಖೇರ್ ಭವಾನಿ, ಶ್ರೀನಗರ್‌ದಲ್ಲಿ ಶಂಕರಾಚಾರ್ಯ, ಲಾಲ್‌ಚೌಕ್‌ನಲ್ಲಿ ಹನುಮಾನ್ ಮಂದಿರ, ಮಟ್ಟನ್‌ನಲ್ಲಿ ಶಿವಮಂದಿರ ಹೀಗೆ ಕೆಲವು ಹಿಂದೂ ಪಳೆಯುಳಿಕೆಗಳು ಇನ್ನು ಕೂಡ ಉಳಿದುಕೊಂಡಿವೆ.



“ಕಾಶ್ಮೀರದ ದೊಡ್ಡ ಶತ್ರು ಪಾಕಿಸ್ತಾನ ಎನ್ನುವುದು ನಮ್ಮ ಯುವಕರಿಗೆ ಅರ್ಥವಾದಾಗ ಮಾತ್ರ ಕಾಶ್ಮೀರ ಸಮಸ್ಯೆ ನಿಧಾನವಾಗಿ ಕೊನೆಗಾಣುತ್ತದೆ. ಶಿಕ್ಷಿತ ಯುವಕರಿಗೆ ಇದು ಅರ್ಥವಾಗುತ್ತಿದೆ. ಆದರೆ ತೀರಾ ಹಿಂದುಳಿದ ಪ್ರದೇಶಗಳಲ್ಲಿರುವ ಅಶಿಕ್ಷಿತ ಯುವಕರಿಗೆ ಇದು ಅರ್ಥವಾಗುತ್ತಿಲ್ಲ.

ಇತ್ತೀಚೆಗಷ್ಟೇ ಅಮರನಾಥ್ ಯಾತ್ರೆ ಆರಂಭವಾಗಿದ್ದು ಉತ್ತರಖಂಡದ ಘಟನೆಗಳ ನಂತರವೂ ಕೂಡ ಹಿಮಲಿಂಗದ ದರ್ಶನಕ್ಕೆ ಸುಮಾರು ನಾಲ್ಕು ಲಕ್ಷ ಹಿಂದೂಗಳು ಆಗಮಿಸುವ ನಿರೀಕ್ಷೆಯಿದೆ. ಪಾಕಿಸ್ತಾನದಲ್ಲಿ ಕುಳಿತಿರುವ ಉಗ್ರರು ಅಮರನಾಥ್ ಯಾತ್ರೆಯ ಮೇಲೆ ದಾಳಿ ನಡೆಸುವ ಬೆದರಿಕೆ ಹಾಕಿದರು ಕೂಡ ಸ್ಥಳೀಯ ಜನರಿಗೆ ಇದು ಮಾನ್ಯವಿಲ್ಲ. ನಾಲ್ಕು ಲಕ್ಷ ಯಾತ್ರಿಕರು ಇಲ್ಲಿಗೆ ಬಂದರೆ ತಾನೇ ನಮಗೆ ಮನೆ ನಡೆಯುವುದು ಎನ್ನುತ್ತಾರೆ ಸ್ಥಳೀಯ ಜನ.

ನಮ್ಮನ್ನು ಬಾರಾಮುಲ್ಲ ಹಾಗು ಗುಲಮಾರ್ಗ್ ಗೆ ಕರೆದುಕೊಂಡು ಹೋಗಿದ್ದ ಸುಮಾರು 55 ವರ್ಷ ವಯಸ್ಸಿನ ಅಬ್ದುಲ್ ಮಜೀದ್ ಹೇಳುವ ಪ್ರಕಾರ “ಕಾಶ್ಮೀರದ ದೊಡ್ಡ ಶತ್ರು ಪಾಕಿಸ್ತಾನ ಎನ್ನುವುದು ನಮ್ಮ ಯುವಕರಿಗೆ ಅರ್ಥವಾದಾಗ ಮಾತ್ರ ಕಾಶ್ಮೀರ ಸಮಸ್ಯೆ ನಿಧಾನವಾಗಿ ಕೊನೆಗಾಣುತ್ತದೆ. ಶಿಕ್ಷಿತ ಯುವಕರಿಗೆ ಇದು ಅರ್ಥವಾಗುತ್ತಿದೆ. ಆದರೆ ಸೋಪೋರ್‌ನಂತಹ ತೀರಾ ಹಿಂದುಳಿದ ಪ್ರದೇಶಗಳಲ್ಲಿರುವ ಅಶಿಕ್ಷಿತ ಯುವಕರಿಗೆ ಇದು ಅರ್ಥವಾಗುತ್ತಿಲ್ಲ. ಆದರೆ ಇಲ್ಲಿರುವ ದೊಡ್ಡ ಸಮಸ್ಯೆ ಚೆನ್ನಾಗಿ ಕಲಿತರು ಕೂಡ ಕಾಶ್ಮೀರಿಗರು ಎನ್ನುವ ಕಾರಣಕ್ಕಾಗಿ ದೆಹಲಿ, ಮುಂಬೈನಲ್ಲಿ ಸಂದೇಹದಿಂದಾಗಿ ನೌಕರಿ ಸಿಗುತ್ತಿಲ್ಲ. ಇಲ್ಲಿ ಪ್ರವಾಸೋದ್ಯಮ ಬಿಟ್ಟು ಬೇರೆ ನೌಕರಿಗಳಿಲ್ಲ. ಇದೇ ಕಾರಣದಿಂದ ನಮ್ಮ ಯುವಕರು ಖಾಲಿ ಕುಳಿತು ಕುಳಿತು ಬೇಸತ್ತು ಅಜಾದಿ ಎಂದು ಹೊರಡುತ್ತಾರೆ ಎಂದು ಹೇಳುವ ಮಜೀದ್ ಕಾಶ್ಮೀರ ಭಾರತದಿಂದ ದೂರವಾದರು ಕೂಡ ಪಾಕಿಸ್ತಾನ ಮತ್ತು ಚೀನಾಗಳ ಕಬಂಧ ಬಾಹುಗಳಲ್ಲಿ ಸೇರಬೇಕು ಎಂಬ ಸಿಂಪಲ್ ವಿಷಯ ನಮ್ಮವರಿಗೆ ಅರ್ಥವಾಗಿಲ್ಲ. ಶೇಖ್ ಅಬ್ದುಲ್ಲ ರಿಗೆ ಇದು ಗೊತ್ತಿತ್ತು ಎಂದು ಸ್ಪಷ್ಟವಾಗಿ ತನ್ನ ಅಭಿಪ್ರಾಯ ಹೇಳುತ್ತಾರೆ.

ಕೆಲವೇ ದಿನಗಳ ಹಿಂದೆ ಲಡಾಕ್ ಗೆ ಹೋಗುವ ಮಾರ್ಗದಲ್ಲಿರುವ 12 ಸಾವಿರ ಫೀಟ್ ಎತ್ತರದಲ್ಲಿರುವ ಜೋಜಿಲಾ ಪಾಸ್‌ನ  ಬಂಡೆಯ ಮೇಲೆ “ವೆಲ್ ಕಂ ಟು ತಾಲಿಬಾನ್”ಎಂದು ಬರೆಯಲಾಗಿತ್ತಂತೆ. 2014 ರಲ್ಲಿ ಅಫಘಾನಿಸ್ತಾನದಿಂದ ಅಮೇರಿಕನ್ ಪಡೆಗಳು ವಾಪಾಸ್ ತೆರಳಿದ ಮೇಲೆ ಅಲ್ಲಿನ ತಾಲಿಬಾನ್ ಮುಜಾಹಿದ್ದಿನ್‌ಗಳು ಕಾಶ್ಮೀರಕ್ಕೆ ಬರುತ್ತಾರೆ ಎಂಬುದು ಇದರ ಅರ್ಥ. ಕಾಶ್ಮೀರದಲ್ಲಿ ಈಗ ಎಲ್ಲೆಡೆ ಇದೇ ಚರ್ಚೆ.

“ಸ್ವರ್ಗವೆಲ್ಲಿಯಾದರು ಇದ್ದರೆ ಅದು ಕಾಶ್ಮೀರದಲ್ಲೇ ಇದೆ”ಎಂದು ಸೂಫಿ ಕವಿಗಳು ಹೊಗಳಿದ ನಾಡು ನಿಧಾನವಾಗಿ ಬದಲಾಗುತ್ತಿದೆ ಎನ್ನುವುದೇ ಸಮಾಧಾನದ ಸಂಗತಿ. ಅ



# ಭಾವನೆಯ ಬಳ್ಳಿ

ಸಂವಹನ ಎನ್ನುವುದು ಏಕಮುಖವಾಗಿರುವುದಿಲ್ಲ. ಒಬ್ಬರು ಹೇಳಿದ್ದನ್ನು ಇನ್ನೊಬ್ಬರು ಆಲಿಸುತ್ತಾರೆ. ನಂತರ ಪ್ರತಿಕ್ರಿಯಿಸುತ್ತಾರೆ. ಈ ತರದ ದ್ವಿಮುಖ ಸಂವಹನ ನಡೆಯಲು ಅಭಿಮತದ ಓದುಗರಿಗೆ ಹೊಸದೊಂದು ಅವಕಾಶವನ್ನು ಈ ಪುಟದ ಮೂಲಕ ನೀಡಲಾಗಿದೆ.

ಮನುಷ್ಯನ ಜೀವನದಲ್ಲಿ ಬರುವ ಪ್ರತಿಯೊಂದು ಕ್ಷಣ ಮತ್ತು ಸಂದರ್ಭ ತನ್ನದೇ ಆದ ಪ್ರಾಮುಖ್ಯತೆಯನ್ನು ಹೊಂದಿರುತ್ತದೆ. ಆ ಕ್ಷಣದ ನಿರೀಕ್ಷೆಯಲ್ಲಿರುವ ತವಕ, ತುಡಿತ, ಆತುರ, ಕಾತರ, ಆನಂದ, ಭಯ, ತೃಪ್ತಿ ಮುಂತಾದ ಅನೇಕ ಭಾವನೆಗಳು ನಮ್ಮ ಮನದಾಳದಿಂದ ಹೊರ ಹೊಮ್ಮುತ್ತವೆ. ಕೆಲವೊಮ್ಮೆ ತೀರಾ ವೈಯಕ್ತಿಕ ಎಂದೆನಿಸುವ ಭಾವನೆಗಳನ್ನು  ನಮ್ಮವರೊಡನೆ ಹಂಚಿದಾಗ ನಾವು ಇನ್ನಷ್ಟು ಹತ್ತಿರವಾಗುತ್ತೇವೆ. ಸಂಘ ಇರುವುದು ನಮ್ಮೆಲ್ಲರನ್ನು ಇನ್ನಷ್ಟು ಹತ್ತಿರ ತರುವ ಸಲುವಾಗಿ.

ನಿಮ್ಮ ಪ್ರೀತಿಯ ಸಿಂಚನದಿಂದ ಮೊಳಕೆಯೊಡೆದು ಈ ಪುಟ ಭಾವನೆಯ ಬಳ್ಳಿಯಾಗಬೇಕು. ಮನದಾಳದ ಮಾತು ಭಾವನೆಗಳ ಬೆನ್ನ ಹತ್ತಿ ಬಳ್ಳಿಯಾಗಿ ಚಪ್ಪರ ತುಂಬಾ ಹರಡಬೇಕು. ಆಸೆಯ ಕಿರಣಗಳು ಪ್ರತಿಯೊಬ್ಬರ ಹೃದಯದಲ್ಲಿ ಹೊಸ ರಾಗ ಮೂಡಿಸಬೇಕು. ಪ್ರತಿ ಸಂಚಿಕೆಯಲ್ಲಿ ನವಭಾವನೆಗಳ ಭಾವುಕತೆಗೆ ಸ್ಪಂದಿಸಲು ನಿಮಗೊಂದು ಅವಕಾಶ. ಬನ್ನಿ ಮನಬಿಚ್ಚಿ ಬರೆಯಿರಿ. ಅಭಿಮತ ನಿಮ್ಮದು.

ಅಭಿಮತ ಸಂಪಾದಕ ಮಂಡಳಿಯ ಸವಿತಾ ಇನಾಮದಾರ್ ಅವರು ಹೊಸ ಅಂಕಣದ ಮೊದಲ ಬರಹದ ಮೂಲಕ ಹೊಸದೊಂದು ವಿಚಾರದ ಬಳ್ಳಿಯ ಬೀಜ ಬಿತ್ತಿದ್ದಾರೆ. ಮುಂಗಾರು ಮಳೆಯಲ್ಲಿ ಈ ಬೀಜ ಮೊಳಕೆಯೊಡೆದು ನಮ್ಮೆಲ್ಲರ ಹೃದಯವನ್ನು ತಟ್ಟಲಿ. ಭಾವನೆಯ ಬಳ್ಳಿ ಬೆಳೆಯಲಿ.

## ಅಮೃತ ಗಳಿಗೆ



ನಿಮ್ಮ ಬಾಳ ಸಂಗಾತಿ ಹ್ಯಾಗೆ ಭೇಟಿಯಾದ್ರು? ಮೊನ್ನೆ ಈ ಪ್ರಶ್ನೆಯನ್ನ ನಮ್ಮ ಪಕ್ಕದ ಮನೆಯ ಕಮಲಜ್ಜಿಯನ್ನು ಕೇಳಿದಾಗ, ಒಳಗಿದ್ದ ಅಜ್ಜ ಮಂದಹಾಸ ಬೀರುತ್ತಾ ಹೊರ ಬಂದ್ರು. ಕಮಲಜ್ಜಿಯನ್ನು ಪ್ರೀತಿಯಿಂದ ನೋಡುತ್ತಾ 'ಹೇಳ.. ಕಮ್ಮೂ... ನಾವಿಬ್ರೂ ಹ್ಯಾಂಗ ಭೆಟ್ಟಿಯಾದ್ವೀಂತ?' ಅಂದ್ರು. ಅಜ್ಜಿಯ ಸುಕ್ಕುಗಟ್ಟಿದ ಗೌರವರ್ಣದ ಗಲ್ಲ ರಂಗೇರಿದಾಗ, ಮೋತಿಬಿಂದುವಿದ್ದ ಕಂಗಳಲ್ಲಿ ಮಿಂಚನ್ನು ಕಂಡಾಗ ದಂಗಾಗಿ ಬಿಟ್ಟೆ. ಈ ಇಳಿ ವಯಸ್ಸಿನಲ್ಲೂ ಆ ಅಮೃತ ಗಳಿಗೆಯನ್ನು ನೆನೆದು ಈ ರೀತಿಯ ಪ್ರತಿಕ್ರಿಯೆಯನ್ನು ಕಣ್ಣಾರೆ  ಕಂಡಾಗ ನಿಜವಾಗಿಯೂ ಇದು ಇಂದಿನ ಯಾಂತ್ರಿಕ ಯುಗದಲ್ಲಿ ಕಂಡು ಬರುವ ಅಪರೂಪದ ದೃಶ್ಯ ಅನಿಸದೇ ಇರಲಿಲ್ಲ. ಅವರದ್ದು 62 ವರ್ಷಗಳ ಸುದೀರ್ಘವಾದ ದಾಪಂತ್ಯ ಜೀವನವಂತೆ.

'ಹೋಗ್ರೀ. ಏನೇನೋ ಮಾತಾಡ್ತೀರಲ್ಲಾ?' ಎಂದು ಬೊಚ್ಚು ಬಾಯನ್ನು ಉದ್ದಕೆ ಮಾಡಿ, ತುಸು ಮುನಿಸು ತೋರುತ್ತಾ ಮನದಲ್ಲೇ ಆ ಕ್ಷಣವನ್ನು ನೆನೆಯುತ್ತಿದ್ದ ಅಜ್ಜಿಯನ್ನು ನೋಡಿ 'ಓಹೋ.. ನಾಚಿಗೆಯಾಗ್ಲಿಕ್ಕೆ ಹತ್ತೇದ ಏನು? ಸರಿ ಬಿಡು. ನಾನ ಹೇಳ್ತೀನಿ' ಎನ್ನುತ್ತಾ 'ನೋಡಮ್ಮಾ. ಈಕೀ ಅಪ್ಪ ಅಮ್ಮ ಈಕೀನ್ನ ನಮ್ಮ ಹಳ್ಳಿಗೆ ನಮ್ಮ ಕಾಕನ ಮಗ ರಾಮಣ್ಣಂಗ ತೋರಿಸೋಸಲಿಕ್ಕೆ ಅಂತ ಕರಕೊಂಡು ಬಂದಿದ್ರು. ಆದ್ರ ಅವತ್ತ ಭಾರೀ ಮಳಿ ಬಂದ ಕಾರಣ ಬೆಳಗಾವಿನಿಂದ ಬರಬೇಕಾದ ರಾಮಣ್ಣ ಅಲ್ಲೇ ಉಳಿದುಬಿಟ್ಟ. ನಮ್ಮ ಹಳ್ಳಿ ಮತ್ತ ಬೆಳಗಾವಿ ನಡುವ ಇದ್ದ ಘಟಪ್ರಭಾ ನದಿ ತುಂಬಿ ಹರಿದ ಕಾರಣ ರಸ್ತಾ ಬಂದ್ ಆಗಿ ಬಿಟ್ಟಿತ್ತು. ಇನ್ನ ನಾಕೈದು ದಿನ ಹೀಂಗ ಅಂತ ಗೊತ್ತಾಗಿ ನಮ್ಮಜ್ಜಿ ನನ್ನ ಕರೆದು 'ಶೀನು, ಹೆಣ್ಣಮಕ್ಕಳ ತಂದಿ–ತಾಯಂದಿರ ನೋವು ನಂಗೊತ್ತಪ್ಪ. ಅವರನ್ನ  ಹಾಂಗ ಹ್ಯಾಂಗ ಬರಿಗೈಲೆ ಕಳಿಸೋದೂಂತ ತಿಳೀವಲ್ಲತು. ಇನ್ನ ಈ ರಸ್ತಾ ಸರಿಹೋಗಿ ನಿಮ್ಮಣ್ಣ ಯಾವಾಗ ಬರ್ತಾನೋ ಏನೋ? ಅಲ್ಲೀವರೆಗೆ? ಹೂಂ ... ಹೋಗ್ಲಿ ನೀನ ಹೂಂ ಅಂದು ಬಿಡಪ್ಪ. ಸಾಕು' ಅಂದ್ರು. ದೊಡ್ಡವ್ರು ಹೇಳಿದ ಮ್ಯಾಲೆ ಮರುಮಾತಾಡದ ಈಕೀ ಮಾರೀ ಸುದ್ದಾ ನೋಡದ ನಾ ತೆಪ್ಪಗೆ ಹೂಂ ಅಂದು ಬಿಟ್ಟೆ. ಅಷ್ಟ ಅಲ್ಲ. ನನ್ನ ನಶೀಬಕ್ಕ ನಮ್ಮಿಬ್ಬರ  ಜಾತಕ ಸುದ್ದಾ ಕೂಡಿ ಬಂತು ಗೊತ್ತದೇನು? ಹೂಂ... ಮುಂದೇನಪ್ಪಾ ಅಂತ ಯೋಚಿಸಕೋತ ಅಂಗಳದಾಗ ಹೋಗಿ ಕರೆ ಆಕಾಶ ನೋಡ್ಕೋತ ನಿಂತೆ. ಎಲ್ಲಾಕಡೆಗೂ ಕಗ್ಗತ್ತಲಿ. ಇನ್ನ ಮುಂದೆ ನನ್ನ ಜೀವನದಾಗೂ ಹೀಂಗ ಆದ್ರ?  ಅಂತ ನಮ್ಮಣ್ಣನ್ನ ಬೈಕೋತ ನಿಂತಿದ್ದೆ.

ಬೀಗ್ರಿಗೆ ಅಂತ ಅವತ್ತ ರಾತ್ರಿ ಔತಣದ ಊಟ ತಯಾರಾಗ್ಲಿಕ್ಕೆ ಹತ್ತಿತ್ತು. ಅದಕ್ಕೂ ಮೊದಲ ಒದ್ದಿ ಸೀರೀನ ಒಣಗಿಸಲಿಕ್ಕೇಂತ ನನ್ನ ತಂಗೀ ಜೋಡೀ ಅಟ್ಟಕ್ಕೆ ಹೋಗುತ್ತಿದ್ದ ನಾಗರಹಾವಿನಂಥಾ ಹೆಳ್ಳಿನ ಆ ಹುಡಗೀನ ನೋಡಿದ ಕೂಡ್ಲೆ ಮಳೀನೀರು ಬಿದ್ದರೂ ಎಚ್ಚರ ಇಲ್ಲದಂಗ ಅಲ್ಲೇ ನಿಂತು ಬಿಟ್ಟೆ. ನನ್ನ ಎದೀ ಬಡಿತ ನನಗ ಗೊತ್ತಿಲ್ಲದನ  ಜೋರಾಗಿಬಿಟ್ತು. ಅರೇ?ನಾನು ಹೂಂ ಅಂದಿದ್ದು ಈ ಸುಂದರೀಗೇನು? ಅಂತ ತಿಳಿದಾಗ ಏನು ಮಾಡಬೇಕೂಂತ ತಿಳಿದ ಸುಮ್ನ ಆಕಿನ್ನ ಕಣ್ಣು ಪಿಳುಕಿಸದನ  ನೋಡ್ಕೋತ ಮಳ್ಯಾಗ ನಿಂತು ಬಿಟ್ಟಿದ್ದೆ. ಆಗ ಆಕಿ ಥಟ್ಟಂತ ತಿರುಗಿ ನನ್ನ ಕಡೆ ಕಿರುನಗಿ ಬೀರಿದಾಗ ಸ್ವರ್ಗ ಒಂದೇ ಗೇಣು. ನನ್ನ ಅದೃಷ್ಟಕ್ಕ ನಾನ ಬೆನ್ನು ಚಪ್ಪರಿಸಿಕೊಂಡಿದ್ದೆ. ಹಹಹ..' ಎಂದೆನ್ನುತ್ತಾ ಅಜ್ಜಿಯ ಪಕ್ಕ ಬಂದು ಕುಳಿತಾಗ ಅವರಿಬ್ಬರ ಮುಖದ ಮೇಲೆ ಸಂತೋಷ, ಸಂತೃಪ್ತಿಯ ನಗು  ಹರಡಿತ್ತು.

ಇದನ್ನು ನೋಡಿ ನನ್ನ ಮನದಲ್ಲೂ ಒಂದು ಹೊಸ ಭಾವನೆ ಉದಯಿಸಿತ್ತು. ಪ್ರತಿಯೊಬ್ಬರ ಜೀವನದಲ್ಲಿ ಹೊಸ ನಂಟನ್ನು ಸೃಷ್ಟಿಸುವ ಆ ಬ್ರಹ್ಮನ ಗಂಟು ಹೀಗೇ ಗಟ್ಟಿಯಾಗಿರಬೇಕು, ದಾಂಪತ್ಯ ಜೀವನ ಸುಖಮಯವಾಗಬೇಕು ಎಂದು. ಅಜ್ಜ–ಅಜ್ಜಿಯರ ಈ ಮಧುರ ಪ್ರೇಮದ ಬಗ್ಗೆ ಅರಿತ ನಂತರ ಇಂತಹ ಇನ್ನಷ್ಟು ಸಂಬಂಧಗಳ ಬಗ್ಗೆ ತಿಳಿಯುವ ತವಕ ಹೆಚ್ಚುತ್ತಾ ಇದೆ. ಅ

***ಸವಿತಾ ಇನಾಮದಾರ್***

### ಅಮೆರಿಕದಲ್ಲಿ ಯಕ್ಷ ಮಂಜೂಷ

ಕಳೆದ ವರ್ಷ ತೆಂಕುತಿಟ್ಟು ಯಕ್ಷಗಾನವನ್ನು ಅಮೆರಿಕದಲ್ಲಿ ಪರಿಚಯಿಸಿದ ವಿದ್ಯಾ ಕೋಳ್ಯೂರು ನೇತೃತ್ವದ ಯಕ್ಷ ಮಂಜೂಷ ತಂಡ ಈ ಬಾರಿ ಅಮೆರಿಕದ ಮೇರಿಲ್ಯಾಂಡ್‌ನಲ್ಲಿ ಅಲ್ಲಿನ ಮಕ್ಕಳಿಗೆ ಯಕ್ಷಗಾನ ತರಬೇತಿ ನೀಡಲು ಇದೇ ಜುಲೈಯಲ್ಲಿ ಅಮೆರಿಕಾ ಪ್ರವಾಸ ಕೈಗೊಂಡಿದೆ. ಡಾ। ಕೋಳ್ಯೂರು ರಾಮಚಂದ್ರ ರಾವ್ ಅವರು ಸಂಪಾದಿಸಿದ ದಾಶರಥಿ ದರ್ಶನ' ಪ್ರಸಂಗದ ಕುರಿತು ಅಮೆರಿಕದಲ್ಲಿ ವಿದ್ಯಾರ್ಥಿಗಳಿಗೆ ತರಬೇತಿ ನೀಡಿ ಪ್ರದರ್ಶಿಸಲಾಗುವುದು.

ತರಬೇತಿ ಮಾತ್ರವಲ್ಲದೆ ಅಮೆರಿಕದ ಯೂನಿವರ್ಸಿಟಿ ಆಫ್ ಮೇರಿಲ್ಯಾಂಡ್ ಬಾಲ್ಟಿಮೋರ್ ಕೌಂಟಿಯಲ್ಲಿ ಹಿಂದಿ ಯಕ್ಷಗಾನ ಪ್ರದರ್ಶನ ನೀಡಲಾಗುವುದು. ನಿರ್ದೇಶಕಿ ವಿದ್ಯಾ ಕೋಳ್ಯೂರು, ಸಂಯೋಜಕ ಕೃಷ್ಣ ಭಟ್, ಭಾಗವತ ಪುತ್ತಿಗೆ ರಘುರಾಮ ಹೊಳ್ಳ, ಮದ್ದಳೆವಾದಕ ಪದ್ಯಾಣ ಜಯರಾಮ್ ಭಟ್, ಚೆಂಡೆ ವಾದಕ ಪದ್ಯಾಣ ಚೈತನ್ಯ, ಧರ್ಮಸ್ಥಳ ಚಂದ್ರಶೇಖರ್, ಮಹೇಶ್ ಮಣಿಯಾಣಿ ದೊಡ್ಡತೋಟ, ಮೋಹನ ಬೆಳ್ಳಿಪ್ಪಾಡಿ, ಪ್ರಶಾಂತ್ ಶೆಟ್ಟಿ ನೆಲ್ಯಾಡಿ, ಲಕ್ಷ್ಮಣ ಕುಮಾರ್ ಮರಕಡ ತಂಡದಲ್ಲಿದ್ದಾರೆ.

### ಜಿ.ಎಂ. ಲಿಂಗರಾಜು

ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯಲ್ಲಿ ಹಿರಿಯ ತಾಂತ್ರಿಕ ಅಧಿಕಾರಿಯಾಗಿರುವ ದೆಹಲಿ ಕರ್ನಾಟಕ ಸಂಘದ ಸದಸ್ಯ ಶ್ರೀ ಜಿ.ಎಂ. ಲಿಂಗರಾಜು ಅವರು ಭಾರತದ ರಾಷ್ಟ್ರೀಯ ಜೈವ ವೈವಿಧ್ಯತಾ ಪ್ರಾಧಿಕಾರದಲ್ಲಿ ಉನ್ನತ ಸಂಪರ್ಕ ಮತ್ತು ತಾಂತ್ರಿಕ ಅಧಿಕಾರಿಯಾಗಿ ಐದು ವರ್ಷಗಳ ಅವಧಿಗೆ ಆಯ್ಕೆಯಾಗಿದ್ದಾರೆ. ಅವರು ಕುವೆಂಪು ವಿಶ್ವವಿದ್ಯಾನಿಲಯದಿಂದ ಸಸ್ಯ ರಾಸಾಯನಿಕ ಮತ್ತು ಔಷಧಿ ಶಾಸ್ತ್ರದ ಪ್ರಕ್ರಿಯೆಗಳನ್ನು ಕಾಡು ಗೇರು ಮರದ ತೊಗಟೆಯಲ್ಲಿ ಕಂಡುಹಿಡಿಯುವ ಸಂಶೋಧನ ಕಾರ್ಯಕ್ಕಾಗಿ ಪಿ.ಎಚ್.ಡಿ. ಪದವಿಯನ್ನು ಪಡೆಯುವ ಅಂತಿಮ ಹಂತದಲ್ಲಿದ್ದಾರೆ.

### ಡಾ. ಎಂ. ಎಸ್. ಶಶಿಕುಮಾರ್

ಕೇಂದ್ರದ ಬಯೋ ಟೆಕ್ನಾಲಜಿ ವಿಭಾಗದಲ್ಲಿ ವಿಜ್ಞಾನಿಯಾಗಿದ್ದ ದೆಹಲಿ ಕರ್ನಾಟಕ ಸಂಘದ ಸದಸ್ಯ ಡಾ. ಎಂ. ಎಸ್. ಶಶಿಕುಮಾರ್ ಅವರು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸೈಂಟಿಫಿಕ್ ಮತ್ತು ಇಂಡಸ್ಟ್ರೀಯಲ್ ರಿಸರ್ಚ್ ವಿಭಾಗದಲ್ಲಿ ವಿಜ್ಞಾನಿ 'ಸಿ' ಆಗಿ ಆಯ್ಕೆಯಾಗಿದ್ದಾರೆ. ಭಾರತದ ಉದ್ಯಮಗಳು ಪೇಟೆಂಟ್ ಪಡೆದ ತಂತ್ರಜ್ಞಾನಗಳಿಂದ ಉತ್ಪನ್ನಗಳನ್ನು ತಯಾರಿಸಲು ನೆರವಾಗುವ ಯೋಜನೆಯಲ್ಲಿ ಅವರು ತೊಡಗಿದ್ದಾರೆ.



### ಬಾ. ಸಾಮಗ

ಹೊರನಾಡಿನಲ್ಲಿ ಕನ್ನಡಕ್ಕಾಗಿ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ದೆಹಲಿ ಕನ್ನಡಿಗ ಮಾಸ ಪತ್ರಿಕೆಯ ಸಂಪಾದಕ ಶ್ರೀ ಬಾ. ಸಾಮಗ ಅವರಿಗೆ ಕರ್ನಾಟಕದ ಮಾಜಿ ಮುಖ್ಯಮಂತ್ರಿ ಶ್ರೀ ಸದಾನಂದ ಗೌಡ ಅವರು ವಿಶ್ವಮಾನವ ಕುವೆಂಪು ಸಮಾಜ ಸೇವ ಪ್ರಶಸ್ತಿಯನ್ನು ಬೆಂಗಳೂರಿನಲ್ಲಿ ನಡೆದ ಕುವೆಂಪು ಕಲಾ ಉತ್ಸವದಲ್ಲಿ ಜುಲೈ 14ರಂದು ನೀಡಿದರು.



### ಏಕ್ತಾ ಮೂರ್ತಿ

ಕಾರ್ಮೆಲ್ ಕಾನ್ವೆಂಟ್ ಸ್ಕೂಲ್ ನ ವಿದ್ಯಾರ್ಥಿನಿ ಏಕ್ತಾ ಮೂರ್ತಿ ಇದೇ ಜುಲೈ 16 ರಂದು ನಡೆದ ವಲಯ ಬ್ಯಾಡ್ಮಿಂಟನ್ ಟೂರ್ನಮೆಂಟ್‌ನಲ್ಲಿ ಮೊದಲ ಸ್ಥಾನ ಪಡೆದು ಇದೇ ಡಿಸೆಂಬರ್‌ನಲ್ಲಿ ನಡೆಯಲಿರುವ ಅಂತರ್‌ವಲಯ ಟೂರ್ನಮೆಂಟ್‌ನಲ್ಲಿ ದಕ್ಷಿಣವಲಯವನ್ನು ಪ್ರತಿನಿಧಿಸಲಿದ್ದಾರೆ. ದೆಹಲಿ ಕರ್ನಾಟಕ ಸಂಘದ ಸದಸ್ಯ ಶ್ರೀ ತ್ಯಾಗೇಶ್ ಮೂರ್ತಿ ಅವರ ಪುತ್ರಿ ಏಕ್ತಾ ಹನ್ನೆರಡನೇ ತರಗತಿಯಲ್ಲಿ ಓದುತ್ತಿದ್ದು ಕಾರ್ಮೆಲ್ ಕಾನ್ವೆಂಟ್ ಸ್ಕೂಲ್ ನ ಬ್ಯಾಡ್‌ಮಿಂಟನ್ ತಂಡದ ನಾಯಕಿಯಾಗಿದ್ದಾಳೆ. ವೇಗದ ಕಾಲಿನ ಚಲನೆ ಮತ್ತು ಬಿರುಸಿನ ಸ್ಮಾಶ್‌ಗಳಿಂದ ಕೂಡಿದ ಅವರ ಆಟವು ಏಕ್ತಾ ಅವರಿಗೆ ಅಂತರ್‌ವಲಯ ಟೂರ್ನಮೆಂಟ್‌ನಲ್ಲಿ ಭಾಗವಹಿಸುವ ಅವಕಾಶವನ್ನು ನೀಡಿದೆ.

### ಜನಕಪುರಿ ಕನ್ನಡ ಕೂಟದ ಹೊಸ ಕಾರ್ಯಕಾರಿ ಸಮಿತಿ

ಜನಕಪುರಿ ಕನ್ನಡ ಕೂಟದ ವಾರ್ಷಿಕ ಮಹಾಸಭೆಯು ಇದೇ ಜುಲೈ 21ರಂದು ನಡೆಯಿತು. ಸಭೆಯಲ್ಲಿ 2013–15 ರ ಸಾಲಿಗೆ ಹೊಸ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು. ಆಯ್ಕೆಯಾದ ಹೊಸ ಸಮಿತಿಯಲ್ಲಿ ಶ್ರೀ ಬಿ.ಕೆ. ಬಸವರಾಜು (ಅಧ್ಯಕ್ಷ), ಶ್ರೀ ಶ್ರೀಹರಿ (ಉಪಾಧ್ಯಕ್ಷ), ಶ್ರೀ ಎನ್. ಪ್ರಕಾಶ್ (ಕಾರ್ಯದರ್ಶಿ), ಶ್ರೀ ಎನ್.ಪಿ. ಚಂದ್ರಶೇಖರ (ಖಜಾಂಚಿ), ಶ್ರೀ ಗಂಗಾಧರ್ (ಜಂಟಿ ಕಾರ್ಯದರ್ಶಿ) ಹಾಗೂ ಸಮಿತಿ ಸದಸ್ಯರಾಗಿ ಶ್ರೀ ಜಿ.ಎಂ. ಲಿಂಗರಾಜು, ಶ್ರೀ ಜಗದೀಶ್ ನಾಯಕ್, ಶ್ರೀ ಶಿವರಾಮ ರೈ ಮತ್ತು ಶ್ರೀ ಶೇಷಗಿರಿ ನಾಯಕ್ ಅವರಿದ್ದಾರೆ.

# ದೇವನೂರ ಮಹಾದೇವ ಅವರ 'ಎದೆಗೆ ಬಿದ್ದ ಅಕ್ಷರ'

ಬಂಡಾಯ – ದಲಿತ ಸಾಹಿತ್ಯ ಚಳುವಳಿಯು ಪ್ರಬಲವಾಗಿ ಕಾಣಿಸಿಕೊಂಡದ್ದು 1970ರ ದಶಕದ ಉತ್ತರಾರ್ಧದಲ್ಲಿ. ಆ ದಶಕದಲ್ಲಿ ನಡೆದ ಅನೇಕ ಘಟನೆಗಳು ಅಂಥದ್ದೊಂದು ಸಾಹಿತ್ಯ ಹುಟ್ಟಿಕೊಳ್ಳಲು ಕಾರಣವಾಯಿತು. ಪ್ರಬಲಗೊಂಡ ಮಾರ್ಕ್ಸವಾದ, ಜನಪ್ರಿಯವಾಗುತ್ತಿದ್ದ ಲೋಹಿಯಾವಾದ, ದಲಿತರ ಕಣ್ದೆರೆಸಿದ ಅಂಬೇಡ್ಕರ್‌ವಾದಗಳ ಜೊತೆಗೆ ಅನೇಕ ಜನಪರ ಚಳುವಳಿಗಳೂ ಪ್ರಗತಿಪರ ಸಾಹಿತ್ಯದ ಹುಟ್ಟಿಗೆ ಕಾರಣವಾದುವು. 1969ರಲ್ಲಿ ದೇವರಾಜ್ ಅರಸರು ಮುಖ್ಯಮಂತ್ರಿಯಾಗಿದ್ದಾಗ ಎಲ್. ಈ. ಹಾವನೂರರು ಮಂಡಿಸಿದ 'ಹಾವನೂರ ವರದಿ' ಹಿಂದುಳಿದವರಲ್ಲಿ ಹೊಸ ಎಚ್ಚರ ಮೂಡಿಸಿತು. 1973ರಲ್ಲಿ ನಡೆದ ಬಸವಲಿಂಗಪ್ಪನವರ 'ಬೂಸಾ ಪ್ರಕರಣ' ಬಗೆಬಗೆಯ ವೈಚಾರಿಕ ಚರ್ಚೆಗಳಿಗೆ ನಾಂದಿ ಹಾಡಿತು. ತಲೆ ಮೇಲೆ ಮಲ ಹೊರುವ ಪದ್ಧತಿಯ ನಿಷೇಧವು ದಲಿತರ ಆತ್ಮಾಭಿಮಾನವನ್ನು ಬಡಿದೆಬ್ಬಿಸಿತು. 1973ರ ಅಗಸ್ಟ್ 25–26ರಂದು ಮೈಸೂರಿನಲ್ಲಿ ನಡೆದ ಜಾತಿ ವಿನಾಶ ಸಮ್ಮೇಳನವು ಬೇರೆ ಬೇರೆ ಜಾತಿಯ ಜನರನ್ನು ಹತ್ತಿರ ತಂದದಲ್ಲದೆ, ಅಂತರಜಾತಿಯ ವಿವಾಹಗಳಿಗೆ ಪ್ರೇರಣೆ ನೀಡಿತು. 1974ರ ಎಪ್ರಿಲ್ 20–21ರಂದು ಮತ್ತೆ ಮೈಸೂರಿನಲ್ಲಿ ರಚನೆಯಾದ 'ಬರಹಗಾರ ಮತ್ತು ಕಲಾವಿದರ ಒಕ್ಕೂಟ', ಈ ಒಕ್ಕೂಟದ ಉದ್ಘಾಟನೆಯಲ್ಲಿ ಕುವೆಂಪು ಮಾಡಿದ ವಿಚಾರ ಪೂರಿತ ಭಾಷಣ, ಅದೇ ವರ್ಷ ಭದ್ರಾವತಿಯಲ್ಲಿ ಹುಟ್ಟಿಕೊಂಡ ದಲಿತ ಸಂಘರ್ಷ ಸಮಿತಿ, ನಾವೆಲ್ಲ ಉತ್ಸಾಹದಿಂದ ಭಾಗವಹಿಸುತ್ತಿದ್ದ ಸಮುದಾಯ ಮತ್ತು ಅದರ ಬೀದಿ ನಾಟಕಗಳು, ಪರಿಣಾಮಕಾರಿಯಾಗಿ ಜ್ಯಾರಿಗೆ ಬಂದ ಭೂಮಸೂದೆ ಮತ್ತಿತರ ಅನೇಕ ಘಟನೆಗಳು ಕನ್ನಡದಲ್ಲಿ ಜನಪರ ಸಾಹಿತ್ಯವೊಂದನ್ನು ಹುಟ್ಟು ಹಾಕಿದವು. ತೆಲುಗಿನ ದಿಗಂಬರ ಸಾಹಿತ್ಯ ಮತ್ತು ಮರಾಠಿಯ ದಲಿತರ ಆತ್ಮಚರಿತ್ರೆಗಳು ನನ್ನಂಥ ಹಲವರನ್ನು ಬಿಚ್ಚಿಬೀಳಿಸಿದ್ದುವು. (ಈ ಕುರಿತಾದ ಹೆಚ್ಚಿನ ವಿವರಣೆಗಳಿಗೆ ನೋಡಿ: ಪುರುಷೋತ್ತಮ ಬಿಳಿಮಲೆ, ಬಂಡಾಯ ದಲಿತ ಸಾಹಿತ್ಯ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು: 1990)

ಈ ಪ್ರಗತಿಪರ ಸಾಹಿತ್ಯದ ಮುಂಚೂಣಿಯಲ್ಲಿ ಅನೇಕ ಬರೆಹಗಾರರಿದ್ದು ಅವರಲ್ಲಿ ಇಬ್ಬರು ನಮ್ಮ ಕಣ್ಮಣಿಗಳಾಗಿದ್ದರು, ಒಬ್ಬರು ಸಿದ್ಧಲಿಂಗಯ್ಯನವರು ಇನ್ನೊಬ್ಬರು ದೇವನೂರು ಮಹಾದೇವನವರು. ನಾವು ಕರೆದಲ್ಲಿಗೆಲ್ಲಾ ಬಂದು, ಪ್ರತಿಭಟನೆಗಳಲ್ಲಿ ಪಾಲ್ಗೊಳ್ಳುತ್ತಿದ್ದ ಅವರ ಸರಳ, ನೇರ ಮತ್ತು ಸ್ಪಷ್ಟ ನುಡಿಗಳಿಂದ ಇಡೀ ಕರ್ನಾಟಕ ಅವರೆಡೆಗೆ ನೋಡುವಂತಾಗಿತ್ತು.

**ವಿವಿಧ ಮಾಧ್ಯಮಗಳು ಎಷ್ಟೇ ಪರಿಣಾಮಕಾರಿಯಾದರೂ, ಜ್ಞಾನಾರ್ಜನೆಗೆ ಪುಸ್ತಕಗಳು ಈಗಲೂ ನಮಗೆ ಪ್ರಮುಖವಾಗುತ್ತವೆ. ಓದುಗರಿಗೆ ಪುಸ್ತಕಗಳನ್ನು ಪರಿಚಯಿಸುವುದರ ಜತೆಗೆ ಕನ್ನಡದ ಕೆಲವು ಉತ್ತಮ ಕೃತಿಗಳನ್ನು *ಅಭಿಮತ*ದ ಮೂಲಕ ವಿಮರ್ಶಿಸುವ ಪ್ರಯತ್ನವನ್ನೂ ಮಾಡಲಾಗುವುದು. ವಿದ್ವಾಂಸ, ವಿಮರ್ಶಕ *ಡಾ. ಪುರುಷೋತ್ತಮ ಬಿಳಿಮಲೆ* ಅವರು ದೇವನೂರು ಮಹಾದೇವ ಅವರ 'ಎದೆಗೆ ಬಿದ್ದ ಅಕ್ಷರ'ವನ್ನು ಅಭಿಮತದ ಆಗಸ್ಟ್ ಸಂಚಿಕೆಗಾಗಿಯೇ ವಿಶೇಷವಾಗಿ ವಿಮರ್ಶಿಸಿದ್ದಾರೆ.**


## Saujanya Printing Press

A HOUSE OF QUALITY PRINTING

C-95, Okhla Industrial Area, Phase-I
New Delhi-110020
Tel: 40520770
Mobile : 9811104398, 9811604398
E-mail : saujanyapp2010@gmail.com / hpgp2006@gmail.com

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ
ಬಹುವರ್ಣದ ಸುಸಜ್ಜಿತ ಮುದ್ರಣಾಲಯ

**ಸೌಜನ್ಯ ಪ್ರಿಂಟಿಂಗ್ ಪ್ರೆಸ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್**

ನಾವು ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು, ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡುತ್ತೇವೆ.

ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು, ಬೈಂಡಿಂಗ್ ಕೆಲಸಗಳಿಗಾಗಿ ನಮ್ಮನ್ನು ದಯವಿಟ್ಟು ಸಂಪರ್ಕಿಸಿರಿ.


ಮುದ್ರಣವೂ ಒಂದು ಕಲೆ, ಅದುವೇ ನಮ್ಮ ನೆಲೆ

ಸಿದ್ಧಲಿಂಗಯ್ಯನವರು ಹೊಲೆಮಾದಿಗರ ಹಾಡು (1975) ಅನೇಕ ಹೋರಾಟಗಳಿಗೆ ಒಂದು ಮ್ಯಾನಿಫೆಷ್ಟೋ (ಪ್ರಣಾಳಿಕೆ) ಆಗಿತ್ತು. ಅವರ ಎರಡನೆಯ ಕವನ ಸಂಕಲನ 'ಸಾವಿರಾರು ನದಿಗಳು' ರಾಜ್ಯದಾದ್ಯಂತ ಹೋರಾಟಗಾರರನ್ನು ಹುಚ್ಚೆಬ್ಬಿಸಿತ್ತು. ಆದರೆ ಸಿದ್ಧಲಿಂಗಯ್ಯನವರು ಮುಂದೆ ಅಧಿಕಾರ ರಾಜಕಾರಣದ ಬೆನ್ನು ಹತ್ತಿ ತನ್ನ ಬರವಣಿಗೆಯ ಪ್ರಖರತೆಯನ್ನು ದಯನೀಯವಾಗಿ ಕಳೆದುಕೊಳ್ಳುತ್ತಾ ಹೋದರು. ಯಾವ ಪಕ್ಷ ಅಧಿಕಾರಕ್ಕೆ ಬಂದರೂ ಕೆಲವು ಹುದ್ದೆಗಳನ್ನು ಹಿಡಿದಿಟ್ಟುಕೊಳ್ಳಬಲ್ಲ ಚಾಣಾಕ್ಷತೆಯನ್ನು ಮೆರೆಯುತ್ತಾ ಬಂದ ಅವರು ತಮ್ಮ ಬರೆವಣಿಗೆಗಳಿಗೆ ತಾನೇ ಅನ್ಯವಾಗುತ್ತಾ ಹೋದರು. ತಮ್ಮ ದಲಿತ ಕಾರ್ಡನ್ನು ಚೆನ್ನಾಗಿ ಬಳಸಿಕೊಂಡ ಡಾ. ಸಿದ್ಧಲಿಂಗಯ್ಯನವರು ಎಲ್ಲ ಬಗೆಯ ಜನಪರ ಚಳುವಳಿಗಳಿಗಿಂತ ದೂರ ಸಾಗಿ, ವ್ಯವಸ್ಥೆಯಲ್ಲಿ ಐಕ್ಯವಾಗಿ ಬಿಟ್ಟರು. ಆದರೆ ದೇವನೂರು ಮಹಾದೇವ ಹಾಗಾಗಲೇ ಇಲ್ಲ, ಹಾಗಾಗಲಿಲ್ಲ ಎಂಬುದಕ್ಕೆ ಅವರ ಈಚಿನ ಕೃತಿ 'ಎದೆಗೆ ಬಿದ್ದ ಅಕ್ಷರ' (ಅಭಿನವ ಪ್ರಕಾಶನ, ಬೆಂಗಳೂರು 2013) ವೇ ಸಾಕ್ಷಿ. ಮೂರು ತಿಂಗಳುಗಳಲ್ಲಿ ಆರು ಮುದ್ರಣಗಳನ್ನು ಕಂಡ ಈ ಕೃತಿಯು ಪ್ರಾಮಾಣಿಕ ಕಳಕಳಿಯ ಬರೆಹಗಾರನೊಬ್ಬನ ಆತ್ಮ ನಿವೇದನೆಯನ್ನು ಮನಮುಟ್ಟುವಂತೆ ಕಟ್ಟಿಕೊಡುತ್ತದೆ.


ದೇವನೂರರ 'ದ್ಯಾವನೂರು' (1973) ಕತಾ ಸಂಕಲನ ದಲಿತ ಲೊಕವನ್ನು ಮೊದಲ ಬಾರಿಗೆ ಕನ್ನಡದ ಓದುರಿಗೆ ತೆರೆದಿಟ್ಟು ಓದುಗರನ್ನು ಬೆಚ್ಚಿಸಿತು. ಆನಂತರದ ಕೃತಿಗಳಾದ ಒಡಲಾಳ ಮತ್ತು ಕುಸುಮ ಬಾಲೆಯು ದೇವನೂರು ಪ್ರತಿಭೆಯನ್ನು ಜಗತ್ತಿಗೆ ಪರಿಚಯಿಸಿದ ಅಪೂರ್ವ ಕೃತಿಗಳು. ಅವರ ಮೊದಲಿನ ಈ ಕೃತಿಗಳ ವೈಚಾರಿಕತೆಯನ್ನು ಮತ್ತೊಮ್ಮೆ 'ಎದೆಗೆ ಬಿದ್ದ ಅಕ್ಷರ' ಹೊಸ ಭಾಷೆಯಲ್ಲಿ ಮತ್ತು ಹೊಸ ಶೈಲಿಯಲ್ಲಿ ನವಿರಾಗಿ ನಿರೂಪಿಸುತ್ತದೆ.

ಈ ಹೊಸ ಕೃತಿಯಲ್ಲಿ ಯಾವುದೇ ಘೋಷಣೆಯಿಲ್ಲ, ಒತ್ತಾಯದಿಂದ ತಂದು ತುರುಕಿದ ಶುಷ್ಕ ವೈಚಾರಿಕತೆಯಿಲ್ಲ, ಕ್ಲೀಷೆಯಾದ ಸಂವಾದಗಳಿಲ್ಲ, ಅತಿರಂಜಿತ ಅಭಿವ್ಯಕ್ತಿ ಕ್ರಮವಿಲ್ಲ, ಸಂಕೀರ್ಣ ತಂತ್ರಗಾರಿಕೆಯಿಲ್ಲ, ಬದಲು ಓದುತ್ತಾ ಹೋದಂತೆ ತಣ್ಣಗೆ ಕೊರೆಯುವ ಘಟನೆಗಳ ನಿರೂಪಣೆಗಳಿವೆ.

ದಲಿತ ಲೋಕದ ಒಳಗಿನಿಂದ ಬಂದ ಅವರು ತನ್ನ ಅನುಭವ ಲೋಕದಲ್ಲಿ ಗಟ್ಟಿಯಾಗಿ ತಳವೂರಿ ನಿಂತು, ಮೇಲಿರುವ ಇತರರನ್ನು ನೋಡುವಾಗ ಅವರಲ್ಲಿ ಇತರ ದಲಿತ ಬರೆಹಗಾರರಲ್ಲಿ ಕಾಣಿಸುವ ಆಕ್ರೋಶ ಕಾಣಿಸುವುದಿಲ್ಲ. ಬದಲು ವ್ಯವಸ್ಥೆಗೆ ಬಲಿಯಾದ ಎಲ್ಲ ವರ್ಗದವರನ್ನೂ ಒಳಗೊಳ್ಳುವ ವಿಶಾಲವಾದ ನೋಟ ಮತ್ತು ಅನುಕಂಪೆಯನ್ನು ಅವರು ತೋರಿಸುತ್ತಾರೆ. ಸಾಮಾನ್ಯವಾಗಿ ಜಾತಿ ವ್ಯವಸ್ಥೆಯ ಮೇಲ್ತುದಿಯಲ್ಲಿರುವವರು ಶ್ರೇಣೀಕರಣದ ಕೆಳಗಿರುವ ದಲಿತರನ್ನು 'ಕೊಳಕರೆಂದೂ, ಮುಟ್ಟುವುದಕ್ಕೆ ಮತ್ತು ನೋಡುವುದಕ್ಕೆ ಅನರ್ಹರಾದವರೆಂದೂ' ಘೋಷಿಸುತ್ತಾರೆ. ಕೆಳತುದಿಯ ಜನರಿಗೆ ಜ್ಞಾನೋದಯವಾದಾಗ, ಮೇಲಿನವರನ್ನು ನೋಡಿ 'ಇಕ್ರಲಾ ವದಿರ್ಲಾ' ಎಂದು ಅವರೂ ಘರ್ಜಿಸುತ್ತಾರೆ. ಮೊದಲಿನದು ಮೇಲಿನಿಂದ ಕೆಳಗಡೆಗೆ ನೋಡಿದ ನೋಟವಾದರೆ, ಎರಡನೆಯದು ಕೆಳಗಿನಿಂದ ಮೇಲೆ ನೋಡಿದ ನೋಟ. ಆದರೆ ದೇವನೂರು ಈ ಎರಡೂ ಅತಿರೇಕಗಳಿಂದ ದೂರ ಉಳಿದು, 'ಭಾರತೀಯ ಶ್ರೇಣೀಕೃತ ಜಾತಿವ್ಯವಸ್ಥೆಗೆ ಎಲ್ಲರೂ ಬಲಿಪಶುಗಳು' ಎಂದು ವಾದಿಸುತ್ತಾರೆ. ಪ್ರಸ್ತುತ ಪುಸ್ತಕದ ಒಂದು ಲೇಖನದಲ್ಲಿನ ಕೆಲವು ಸಾಲುಗಳು ಇಂತಿವೆ: 'ಈ ದೇಶದಲ್ಲಿ ಬ್ರಾಹ್ಮಣರಿಗೇನೇ ಒಂದು ರಾಜ್ಯ ಕೊಟ್ರೂವೆ, ಅಲ್ಲಿ ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಮತ್ತಿನ್ಯಾವಾವುದೋ ಹುಟ್ಕಂಡು,



ಈ ಕೃತಿಯಲ್ಲಿ ದೇವನೂರು ನಿರೂಪಿಸಿದ ಅನೇಕ ಘಟನೆಗಳು ನಮ್ಮ ಸಮಾಜವು ಎಷ್ಟು ರೋಗಗ್ರಸ್ಥವಾಗಿದೆ ಎಂಬುದನ್ನು ಸರಳವಾಗಿ ಆದರೆ ಗಾಢವಾಗಿ ನಿರೂಪಿಸುತ್ತಲೇ ಹೋಗುತ್ತದೆ. 'ಬ್ರಾಹ್ಮಣರ ಬಹಿರಂಗ ಸಭೆಯ ಅಂತರಂಗದಲಿ ಕೆಲಕಾಲ' ಲೇಖನವು ಕುವೆಂಪು ವಿರೋಧಿಗಳ ಕೊಳಕುತನವನ್ನು ಎಷ್ಟು ಶಕ್ತಿಶಾಲಿಯಾಗೆ ಬಯಲಿಗೆಳೆಯುತ್ತದೆ ಎಂದರೆ ಇದನ್ನು ಬರೆಯಲು ದೇವನೂರಿಗೆ ಮಾತ್ರ ಸಾಧ್ಯ ಎಂಬಂಥ ಭಾವ ಮೂಡಿಬಿಡುತ್ತದೆ.




ನೂರೆಂಟು ಭಿನ್ನಾಭಿಪ್ರಾಯಗಳು ಆ ಬ್ರಾಹ್ಮಣರ ರಾಜ್ಯದಲ್ಲಿಯೇ ಬರುತ್ತೆ. ಅಲ್ಲಿ ಜರಗುವ ವಾಗ್ವಾದ ಗೇಲಿ, ಅವಹೇಳನ ಆತ್ಮಹತ್ಯೆಗಳು ಆ ರಾಜ್ಯದ ಸಹಜ ಕ್ರಿಯೆಗಳಾಗಬಹುದು, ಹಾಗೇನೇ ದಲಿತರಿಗೆ ಒಂದು ರಾಜ್ಯಕೊಟ್ಟರೂನು, ಅಲ್ಲೂ ಕೂಡಾ ಬಲಗೈ, ಎಡಗೈ, ಎಡಗೈನ ಹೆಬ್ಬೆರಳು, ಬಲಗೈನ ಹೆಬ್ಬೆರಳು ಅಥವಾ ಕಿರುಬೆರಳು–ಹಿಂಗೆ ವಿವಾದ ಜಗಳ ಮತ್ತೆ ಕೊಲೆಗಳು ಈ ರಾಜ್ಯದ ದಿನನಿತ್ಯ ಜರುಗುವ ಕ್ರಿಯೆಗಳಾಗಬಹುದು' (ಕನ್ನಡಕ್ಕೂ ಒಂದು ರಾಷ್ಟ್ರೀಯತೆ, ಪುಟ: 139).

ಈ ವಿಶಾಲ ನೋಟ ದೇವನೂರರನ್ನು ಇತರ ದಲಿತ ಬರೆಹಗಾರರಿಗಿಂತ ಪ್ರತ್ಯೇಕಿಸಿದ ಹಾಗೆ ನಮ್ಮ ನಡುವಿನ ಮಹತ್ವದ ಚಿಂತಕನನ್ನಾಗಿ ಮಾಡಿದೆ. ಭಾರತೀಯ ಜಾತಿ ವ್ಯವಸ್ಥೆಗೆ ಎಲ್ಲರೂ ಬಲಿಪಶುಗಳು ಎಂದು ದೇವನೂರು ಬಲವಾಗಿ ನಂಬುತ್ತಾರೆ. ಹಾಗಾಗಿ ಅವರ ಬರೆಹಗಳಲ್ಲಿ ದ್ವೇಷ ಕಂಡು ಬರುವುದಿಲ್ಲ.

ಜಾತಿ ವ್ಯವಸ್ಥೆಯ ಮೇಲ್ತುದಿಯಲ್ಲಿರುವವರು ಕೆಳಗಿನವರನ್ನು ನಿಕೃಷ್ಟವಾಗಿ ನೋಡುವುದು ಸಾಮಾನ್ಯ ಸಂಗತಿಯಾಗಿದೆ. ದಲಿತ ಬರೆಹಗಾರರೇ 'ದಲಿತರದ್ದು ಹುಳು ತಿಂದ ಮೆದುಳುಗಳು' ಎಂದು ಬಣ್ಣಿಸಿದ್ದುಂಟು. ಈ ನೋಟಕ್ಕಿಂತ ಭಿನ್ನವಾಗಿ ಮಹಾದೇವ ಅವರು, ದಲಿತ ಲೋಕದೊಳಗಿನ ಚೈತನ್ಯವನ್ನೂ ಅವರೊಳಗಿರುವ ಮಾನವೀಯತೆಯನ್ನೂ ಅದ್ಭುತವಾಗಿ ಅನಾವರಣ ಮಾಡುತ್ತಾರೆ. ಕೆಳಗಿನ ವಿವರಣೆಯನ್ನು ಗಮನಿಸಿ–

'ಒಂದ್ಸಲ ನಮ್ಮ ಮನೆಯ ಕಕ್ಕಸ್ಸು ಕಮೋಡ್ ಕಟ್ಟಿಕೊಂಡಿತ್ತು. ಕಡ್ಡೀಲಿ ಅಲ್ಲಾಡಿಸಿ ಸರಿಮಾಡಲು ನೋಡಿದೆ, ಆಗಲಿಲ್ಲ, ಕೈಗೇ ಪ್ಲಾಷ್ಟಿಕ್ ಚೀಲ ಬಳಸಿ ರಿಪೇರಿ ಮಾಡಲು ನೋಡಿದೆ, ಆಗಲಿಲ್ಲ. ಕೊನೆಗೆ ಸೋತು 'ಅಯ್ಯೋ ನನ್ನ ಮಕ್ಕಳದಲ್ಲವೇ' ಎಂಬ ಭಾವನೆ ತಂದುಕೊಂಡು ಕೈಯಲ್ಲೇ ಸರಿಮಾಡಿದೆ. ಈ ಭಾವನೆ ಬರದಿದ್ದರೆ ನಾನು ಕೈ ಹಾಕುತ್ತಿರಲಿಲ್ಲ. ಇಲ್ಲಿ ಸೋಲು ಮತ್ತು ಆ ಭಾವನೆ ಎರಡೂ ಇದೆ. ಮುಂದೆ ನನಗೆ ಆಶ್ಚರ್ಯ ಕಾದಿತ್ತು. ನನ್ನ ಪತ್ನಿ ಸುಮಿತ್ರಾ ತನ್ನ ಸಂಶೋಧನೆಗಾಗಿ ಒಬ್ಬ ಪೌರ ಕಾರ್ಮಿಕ ಹಿರಿಯರನ್ನು 'ನಿಮಗೆ ಮ್ಯಾನ್ ಹೋಲ್ ಡ್ರೈನೇಜ್ ಮಾಡಲು ಕಷ್ಟ ಕಹಿ ಅಂತ ಅನ್ನಿಸುದಿಲ್ಲವೇ?' ಅಂತ ಪ್ರಶ್ನಿಸಿದ್ದಕ್ಕೆ 'ಯಾಕ್ರಮ್ಮಾ ಕಷ್ಟ ಕಹಿ, ನನ್ನ ಮಕ್ಕಳದು ಅಂತ್ಕಂಡ್ರಾಯ್ತು' ಅಂದರಂತೆ. ಅಸಹಾಯಕತೆ ಸೋಲಿನ ನಡುವೆಯೂ ಈ ದೊಡ್ಡ ಮನಸ್ಸೂ ಇಲ್ಲದಿದ್ದರೆ ಈ ಕೆಲ್ಸ ಮಾಡುವುದು ಕಷ್ಟ. ಆದರೆ ಇಂಥ ದೊಡ್ಡ ಮನಸ್ಸನ್ನೇ ಸಮಾಜ ಕೊಳಕು ಅಂತ ಗಣಿಸಿದೆ. ಇದು ಸಮಾಜವೇ ಕೊಳಕಾಗಿರುವುದುರ ಲಕ್ಷಣ ಅಷ್ಟೆ" (ಕೊಳಕು ಎಲ್ಲದೆ, ಪುಟ 14–15).

ಈ ಕೃತಿಯಲ್ಲಿ ದೇವನೂರು ನಿರೂಪಿಸಿದ ಅನೇಕ ಘಟನೆಗಳು ನಮ್ಮ ಸಮಾಜವು ಎಷ್ಟು ರೋಗಗ್ರಸ್ಥವಾಗಿದೆ ಎಂಬುದನ್ನು ಸರಳವಾಗಿ ಆದರೆ ಗಾಢವಾಗಿ ನಿರೂಪಿಸುತ್ತಲೇ ಹೋಗುತ್ತದೆ. 'ಬ್ರಾಹ್ಮಣರ ಬಹಿರಂಗ ಸಭೆಯ ಅಂತರಂಗದಲಿ ಕೆಲಕಾಲ' ಲೇಖನವು ಕುವೆಂಪು ವಿರೋಧಿಗಳ ಕೊಳಕುತನವನ್ನು ಎಷ್ಟು ಶಕ್ತಿಶಾಲಿಯಾಗೆ ಬಯಲಿಗೆಳೆಯುತ್ತದೆ ಎಂದರೆ ಇದನ್ನು ಬರೆಯಲು ದೇವನೂರಿಗೆ ಮಾತ್ರ ಸಾಧ್ಯ ಎಂಬಂಥ ಭಾವ ಮೂಡಿಬಿಡುತ್ತದೆ.

ಅಸ್ಪೃಶ್ಯತೆ ಈ ದೇಶದ ಘನ ಘೋರವಾದ ಮತ್ತು ಅತ್ಯಂತ ಹೇಯವಾದ ಸೃಷ್ಟಿ. ಆ ವರ್ಗದಲ್ಲಿ ಹುಟ್ಟದೆ ಸಂವೇದನಾಶೀಲಾ ಬರೆಹಗಾರನೊಬ್ಬನು ತನ್ನನ್ನು ನಿರಂತರವಾಗಿ ಶೋಷಿಸಿದ ಸಮಾಜವನ್ನು ಗ್ರಹಿಸಿದ ಬಗೆಯನ್ನು ತಿಳಿದುಕೊಳ್ಳಲು ನಾವೆಲ್ಲ ಈ ಪುಸ್ತಕವನ್ನು ಅಗತ್ಯವಾಗಿ ಓದಬೇಕು. ಅ

***ಪುರುಷೋತ್ತಮ ಬಿಳಿಮಲೆ***

# ಕಾಯುವ ಬಂಡೆಕಲ್ಲು ಮತ್ತು ಹರಿಯುವ ನದಿ

ನಿರಂತರವಾಗಿರುವುದು ಎಲ್ಲೂ ನಿಲ್ಲುವುದಿಲ್ಲ. ಬೆಟ್ಟದಿಂದಿಳಿದು ಕಣಿವೆಯನ್ನು ಹುಡುಕಿ ಹರಿಯುವ ನದಿಯಂತೆ. ತಾನು ಹಾದು ಹೋಗುವ ದಾರಿಯಲ್ಲಿ ಹೊಸತನ್ನು ಹುಟ್ಟಿಸುತ್ತಾ, ಬದುಕಿಗೆ ಆಸರೆಯಾಗುತ್ತಾ ಮುಂದುವರಿಯುವ ನದಿ ಕಡಲು ಸೇರುವುದು ತನಗಾಗಿಯಲ್ಲ. ಮತ್ತೆ ಮೋಡವಾಗಿ ಮಳೆ ಸುರಿದು ನದಿಯಾಗಿ ಹರಿಯಲು. ಮತ್ತೊಂದನ್ನು ಹುಟ್ಟಿಸಲು ಮತ್ತು ಬೆಳೆಸಲು. ಬದುಕೆಂಬುದು ನಿರಂತರ.



ತಟಸ್ಥವಾದುದು ಎಲ್ಲೂ ಹೋಗುವುದಿಲ್ಲ. ನಿಂತಲ್ಲೇ ನಿಲ್ಲುತ್ತದೆ ಬಂಡೆಗಲ್ಲಿನಂತೆ. ನಿಂತವರು ಕಾಯುತ್ತಿರುತ್ತಾರೆ. ಒಡಲಲ್ಲಿ ಉರಿವ ಬೆಂಕಿಗೆ ಕಾದು ಕಾಯುತ್ತಾರೆ. ಯಾರೋ ಬರುವ ನಿರೀಕ್ಷೆಯಲ್ಲಿ ಕಾಯುತ್ತಾರೆ. ತಮಗೇನೂ ಆಗಬಾರದೆಂದು ಕಾವಲಾಗಿ ಕಾಯುತ್ತಾರೆ. ಬಂಡೆಕಲ್ಲು ನಿಂತಲ್ಲೆ ಇರುತ್ತದೆ. ಶತಮಾನಗಳ ಲೆಕ್ಕವನ್ನು ಹಾಕುತ್ತಾ ಇರುತ್ತದೆ.

ಅಂಬಿಗನಿಗೆ ನದಿ ಒಗಟಾಗುವುದಿಲ್ಲ. ತನ್ನ ದೋಣಿಯೇರಿ ಬಂದವರನ್ನು ದಡದಾಟಿಸುವುದು ಅವನ ಗುರಿ, ಅದಕ್ಕೆ ಅವನು ತನ್ನ ಹುಟ್ಟನ್ನು ಬದಲಿಸುತ್ತಾನೆ. ಪಯಣಿಗರ ಚಿಂತೆಯಲ್ಲಿ ತನ್ನನ್ನು ಮರೆಯುತ್ತಾನೆ. ದೋಣಿಯೇರಿದವರೆಲ್ಲರ ಗುರಿ ನದಿ ದಾಟುವುದು. ದಾಟಿದ ನಂತರ ದಾರಿ ಬೇರೆ ಇರಬಹುದು. ಅಂಬಿಗನಿಗೆ ನದಿಯ ನಡುವಿನಲ್ಲಿರುವ ಬಂಡೆಗಲ್ಲನ್ನು ದಾಟಿ ಹೋಗುವುದೇ ಗುರಿ.

ದೆಹಲಿ ಕರ್ನಾಟಕ ಸಂಘದ ಆಡಳಿತದ ಚುಕ್ಕಾಣಿಯನ್ನು ಹೊಸ ಸಮಿತಿ ಕೈಗೆತ್ತಿಕೊಂಡಿದೆ. ಆರು ದಶಕಗಳನ್ನು ಮೀರಿ ಬೆಳೆದಿರುವ ಸಂಘ ಇಂದು ಸದೃಢವಾಗಿದೆ. ಹಲವರ ಕೊಡುಗೆಗಳನ್ನು ಪಡೆದು ಬೆಳೆದಿದೆ. ಮುಂದಿನ ತಲೆಮಾರಿಗೆ ಆಶಾಗೋಪುರವಾಗಿ ನಿಂತಿದೆ. ಜವಾಬ್ದಾರಿಯ ಹೊರೆ ಹಗುರವೇನಲ್ಲ.

ಅಭಿಮತ ಪತ್ರಿಕೆ ಸಂಘದ ಸದಸ್ಯರ ನಡುವಿನ ಸಂವಹನಕ್ಕಿದೆ. ಸದಸ್ಯರು ಅದರ ಓದುಗರು ಮಾತ್ರವಲ್ಲ. ಅವರ ಚಿಂತನೆಯ ಚಿಲುಮೆಗಳು, ಪ್ರತಿಭೆಯ ಕಾರಂಜಿಗಳು, ಬೆಳವಣಿಗೆಯ ಮೆಟ್ಟಿಲುಗಳು, ಘಟನೆಗಳ ಮಜಲುಗಳು, ನೆನಪಿನ ಚಿತ್ರಗಳು, ಆತ್ಮೀಯತೆಯ ಪತ್ರಗಳು ಎಲ್ಲದಕ್ಕೂ ಇಲ್ಲಿಯ ಪುಟಗಳು ಕಾಯುತ್ತಿವೆ. ಬದುಕು, ಸಂಸ್ಕೃತಿ, ಕಲೆ, ಸಾಹಿತ್ಯಗಳನ್ನು ನಮ್ಮ ನುಡಿಯಲ್ಲಿ ಕಟ್ಟೋಣ.

ನದಿಯಿಲ್ಲದಿದ್ದರೆ ಅಂಬಿಗನೆಲ್ಲಿ? ಬಂಡೆಕಲ್ಲನೇರಲು ದೋಣಿಯೇಕೆ? ಅ

*ಬಾಲಕೃಷ್ಣ ನಾಯ್ಕ್ ಡಿ.*



Editor: Balakrishna Naik D., Designer : Prakash Shetty Ulepady, Editorial Coordinator : Savita Inamdar,
Printed & Published by C.M. Nagaraja, General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615 and
printed at Saujanya Printing PressC-95, Okhla Industrial Area, Phase-I, New Delhi-110020, Tel: 40520770

# KBL TRAVEL CARD

**Double your holiday excitement!**




Safe and easy way to use and carry your foreign exchange

This card can be frequently reloaded as per your requirement

# KBL GIFT CARD

**A great way to gift your loved one**




Card available in denominations starting from ₹ 500/- to ₹ 25,000/-

Freedom for the beneficiary to choose the gift

Shop, dine & purchase online

*Conditions apply

Call Toll Free No. 1800 425 1444 or Step into your nearest branch for details

**Karnataka Bank Ltd.**

Your Family Bank. Across India.

Regd. & Head Office: Mangalore - 575 002

E-mail: info@ktkbank.com Visit us at: www.karnatakabank.com

Delhi Karnataka Sangha Abhimatha Monthly,
August - 2013, Price Rs.1/- RNI Regn. No. 53405/91, DL-SW-1/4016/13-15
Printout Date : August 8th / 9th, Postal Date :10th / 11th, Total Pages-20

www.puravankara.com
sales@puravankara.com

**PURAVANKARA**

# VENICE CALLING.

Your last chance to own a Venetian home in Bangalore.




**Purva Venezia,** Yelahanka, Bangalore. 2 & 3 BHK Apts. 1276 to 1614 sq.ft.

Live in Venice, even while you're in Bangalore. Live amidst the finest amenities and ambience - truly international in every sense. Live next door to a 1,600 acres UAS Campus. Live a life that's way above ordinary.

**Call: +91 80 44 55 55 55**

**Puravankara Projects Limited:** 130/1, Ulsoor Road, Bangalore - 560042. Sales office on Ulsoor Road open from 9 am to 6 pm on all days. Purva Venezia is financed by Trustee Partner: IL&FS Trust Company Limited SMS `Purva Venezia from <your location>' to 90088 90088, and get driving directions on your mobile phone. CREDAI

SANKALP